
ಕೊರವಂಜಿ



Koravanji

ಡಿಶೆಂಬರ್ ೧೯೪೪

ಮಾಸ ಪತ್ರಿಕೆ

ಸಂಪಾದಕರು :
ಶ್ರೀ|| ರಾ. ಶಿ.

ಚಿತ್ರಕಾರರು :
ಶ್ರೀ|| ಆರ್. ಕೆ. ಲಕ್ಷ್ಮಣ್.

ಬರಹಗಾರರು :

ಶ್ರೀ|| ಪಾರಾಶಿ

ಶ್ರೀ|| ಎಂ. ಸಾಧಿರಾಜ

ಶ್ರೀ|| ನಾ. ಕ.

ಶ್ರೀ|| ಪಾರಾಂತ

ಶ್ರೀ|| ಬಿ. ಸ್ವಾ.

ಶ್ರೀ|| ಎಸ್. ಪಿ. ರೇವಣ್ಣ

ಶ್ರೀ|| .ಕನ್ನಡಂ

ಶ್ರೀ|| ಬೀರಣ್ಣ

ಬಿಡಿ ಪತ್ರಿಕೆ -- ಕೇವಲ ಎರಡಾಣೆ

ತಿಳಿನಗೆಯ ಮಾಸ ಪತ್ರಿಕೆ.

ಕೊರವಂಜಿ

ಕೊರವಂಜಿಯು ತಿಳಿನಗೆಯ ಸಚಿತ್ರ ಮಾಸಪತ್ರಿಕೆ. ತಿಳಿಹಾಸ್ಯದ ಲೇಖನಗಳು, ಹರಟೆಗಳು, ಅಣಕವಾಡುಗಳು, ನಗೆ ಹಾಡುಗಳು ಇವುಗಳಿಗೆ ಸರ್ವದಾ ಸುಸ್ವಾಗತವುಂಟು. ಆದರೆ ವ್ಯಕ್ತಿಯನ್ನುದ್ದೇಶಿಸಿ ಬರೆದ ಲೇಖನಗಳಿಗೆ ಎಡೆಯಿಲ್ಲ.

ಲೇಖನಗಳನ್ನು ಕಳುಹಿಸುವವರು ತಮ್ಮಲ್ಲಿ ಒಂದು ಪ್ರತಿಯನ್ನಿಟ್ಟುಕೊಂಡರೆ ಬಹಳ ಒಳಿತು. ಸುಲಭವಾಗಿ ಓದುವಂತೆ ತಿಳಿಬರಹದಲ್ಲಿ ಬರೆದರೆ, ಅಚ್ಚಾದಾಗ ತಪ್ಪುತಪ್ಪುಗಳು ಕಡಿಮೆಯಾಗುವುವು.

ಸಂಪಾದಕೀಯ ಪತ್ರವ್ಯವಹಾರಗಳನ್ನು ಸಂಪಾದಕರಲ್ಲೂ ವ್ಯವಸ್ಥಾಪಕರಲ್ಲಿ ಮಿಕ್ಕ ವಿಚಾರಗಳನ್ನೂ ಪ್ರಸ್ತಾಪಿಸಬೇಕು.

ಬಳೇಪೇಟೆ, ಬೆಂಗಳೂರು ಸಿಟಿ.

ವಾರ್ಷಿಕ ಚಂದಾ ಅಂಚೆ ಮೂಲಕ ರೂ. ೨—೦—೦

ಬಿಡಿ ಪ್ರತಿ ಕೇವಲ ಆಣೆ ೦—೨—೦

ಚಂದಾದಾರರು ವಿಳಾಸ ಬದಲಾವಣೆಯಾದಲ್ಲಿ, ಕೂಡಲೆ ನಮಗೆ ತಿಳಿಸಿದರೆ, ಬಹಳ ಸಹಾಯ ಮಾಡಿದಂತಾಗುವುದು.

ವಿಷಯಾನುಕ್ರಮಣಿಕೆ

ಭಾರತೀಯ ಕಾರ್ಮಿಕರಿಂದ

ಭಾರತೀಯ ಬಂಡವಾಳಗಾರರಿಂದ

ಭಾರತೀಯ ಕಲಾಕೌಶಲ್ಯದಿಂದ

ಕೂಡಿರುವುದೇ


ಬೆಂಗಾಲ್ ಲ್ಯಾಂಪ್ಸ್

ತಯಾರಿಕೆಯ ವೈಶಿಷ್ಟ್ಯ

—

ಭಾರತದಲ್ಲೆಲ್ಲಾ ಉತ್ತಮವಾದುದೆಂದು

ಖ್ಯಾತಿಪಡೆದಿದೆ



ಸಂಪುಟ ೩] ಕೊರವಂಜಿ—ಡಿಸೆಂಬರ್ ೧೯೪೪ [ಸಂಚಿಕೆ ೯

ಕುಹಕಿಡಿಗಳು

ಮುಂದಿನ ಅಧಿವೇಶನದ ವೇಳೆಗೆ ಕನ್ನಡವನ್ನು ಕಲಿತು ಪ್ರ. ಪ್ರ. ಸಭೆಯ ಕಾರ್ಯಕಲಾಪಗಳಲ್ಲಿ ನನ್ನ ಭಾಗವನ್ನು ನಿರ್ವಹಿಸುತ್ತೇನೆ, ಎಂದು ಹೊಸ ಮಂತ್ರಿಗಳು ಭರವಸೆ ಇತ್ತರು.

—ಆದರೆ ಪ್ರ. ಪ್ರ. ಸಭೆಯ ಕಾರ್ಯಕಲಾಪಗಳನ್ನು ನೆರವೇರಿಸಲು ಬೇಕಾದ, 'ನೋಡೋಣ' 'ಮಾಡೋಣ' 'ಇಲ್ಲ' 'ಉಹು' ಎಂಬ ನಾಲ್ಕು ಮಾತುಗಳನ್ನು ಕಲಿಯಲು ಅಷ್ಟು ಸಮಯ ಬೇಕೆ?—

✤ ✤

ಮಹಾ ಚುನಾವಣೆಗಳು ಸುಗ್ಗಿಯ ತರುಣದಲ್ಲೇ ನಡೆಯುವುದಂತೆ.

—ಅದೇಕೋ—ಬರಗಾಲದ ಹೊತ್ತಿಗೆ ಚುನಾವಣೆಗಳೇರ್ಪಟ್ಟರೆ ಚೆನ್ನಲ್ಲವೇ?

✤ ✤ ✤

“ಬ್ರಾಹ್ಮಣರ ಬೇಕರಿ” ಎಂದು ಜಾಹೀರಾತು.

—ಈಗಿನ ಕಾಲದಲ್ಲಿ ಬ್ರಾಹ್ಮಣರು ಬೇಕರಿ ಎಂದು ಕೇಳುವ ಕೆಚ್ಚೆದೆಯು ಯಾರಿಗಿದೆ?

✤ ✤ ✤

ಕಸ್ತೂರಿಬಾ ನಿಧಿಗೆ ನಾನು ಕೊಟ್ಟ ಎರಡು ರೂಪಾಯಿ, ತೊಂಭತ್ತುಸಾವಿರದ ಜತೆಗೆ, ಸ್ಟಾಂಪಿನ ಖರ್ಚಿಗೆ ಹೋಯಿತಂತೆ.

—ನನ್ನ ಹಣವೆಲ್ಲಾ ಸ್ಟಾಂಪಿಗೆ, ಕಛೇರಿಗೆ ಹೋಗುವವಾಡಿಕೆಯಾದರೂ, ಧರ್ಮಕ್ಕೆ ಕೊಟ್ಟದ್ದೂ ಇದೇಗತಿಯಾಗಬೇಕೆ ?

✤ ✤ ✤

ಪ್ರಾಂತಿಕ ಮುಸ್ಲಿಂ ಲೀಗ್ ಸಂಸ್ಥೆಯೊಂದು ಹೊಸ ಶಿರೋನಾಮೆಯನ್ನು ಉಪಯೋಗಿಸುತ್ತಿದ್ದಾರಂತೆ, “ ಜಿನ್ನದಾತಾ ಸುಖೀಭವ ”

—ಇದು ಖಚಿತವೆಂದು ಹೇಳಲು ಸಾಕ್ಷ್ಯವಿಲ್ಲ.

✤ ✤ ✤

“ ಕರಿಯ ಬಣ್ಣದವರನ್ನು ಇಂಗ್ಲೆಂಡಿನಲ್ಲಿ ತುಚ್ಛವಾಗಿ ಕಾಣುತ್ತಾರೆ ”,

—ಇದೇನು ಮಹಾ ! ಅತಿರಥ ಮಹಾರಥರಿರುವ ರಷ್ಯನರನ್ನೇ ಈಗ ಅವರು ತುಚ್ಛೀಕರವಾಗಿ ಕಾಣುವಾಗ ಇತರರ ಪಾಡೇನು.

✤ ✤ ✤

“ ರೂಸ್‌ವೆಲ್ಟರು ನಾಲ್ಕನೆಯ ಬಾರಿ ಚುನಾಯಿತರಾದರು ”

—ನಮ್ಮೂರಿನಲ್ಲಿಯೂ ಇದೇ ಫಲಿತಾಂಶವುಂಟಾಗುತ್ತಿದ್ದಿತು. ಆದರೆ ಡ್ಯೂಯಿಯನ್ನು ಏನಾದರೂ ಸಬೂಬು ಹೇಳಿ, ಸೆರೆಯಲ್ಲಿಡುತ್ತಿದ್ದರು ಚುನಾವಣೆಯವೇಳೆಗೆ—

✤ ✤ ✤

” ಗಂಡಸನ್ನು ಹಿಡಿದುಹಾಕಬೇಕಾದರೆ ತೋಳುಗಳಿಂದಲೇ ”

—ವನಿತಾಸದನದ ಭಾಷಣಕಾರರು.

✤ ✤ ✤

ಅವನೆಂಥಾ ಕದೀಮ ಅನ್ನುತ್ತೀರಿ. ಹಣದಾಶೆಗೋಸ್ಕರವೇ ಶೋಭನ ಸಮರ್ಥಗಳನ್ನು ಮದುವೆಯಾಗಲು ಸಿದ್ಧನಿರುವನು.

✤

ಇನ್ನೊಮ್ಮೆ ವೈಸರಾಯರು ಮುಖಂಡರನ್ನು ಭೇಟಿಮಾಡುತ್ತಿರುವರಂತೆ—

—ಮುಖಂಡರೆಲ್ಲರೂ ಸೆರೆಯಲ್ಲಿರುವಾಗ, ನಮ್ಮ ಸರ್ತಿ ಈಗಲೇ ಬರುತ್ತೇನೊ !

ಉ ರಿ ಗಾ ಳು

ಬೆಂಗಳೂರು ಮೈಸೂರುಗಳಿಂದ ಅನೇಕರು ಹೊರ ಊರುಗಳಿಗೆ ವರ್ಗ ಕೇಳುತ್ತಿರುವರಂತೆ...........ಮಸಾಲೆದೋಸೆ ಸಿಗದಿರುವುದರಿಂದಲೋ ?

✤ ✤

“ ಭಾರತ ವರ್ಷದಲ್ಲಿ ಹೊಸರಾಷ್ಟ್ರೀಯತೆ ಜನ್ಮತಾಳುತ್ತಿದೆ ” (ಭಾಷಣ).... ಸೂಲಗಿತ್ತಿ ಜಿನ್ನಾ ಆದರೆ, ಅವುಳಿಜವುಳಿಯೋ ಸರಿ !

✤

“ ವೇವೆಲ್‌ರವರು ಇಂಡಿಯಾದ ಪ್ರಥಮ ಸಿಪಾಯಿ ವೈಸ್ರಾಯರು !’’.... ಆದರೆ, ಅಮೆರಿಯುವರು ಆ ಸಿಪಾಯಿಗೆ “ ರೈಟ್ ಟರ್ನ್ ” ಎಂಬ ಆಜ್ಞೆ ಕೊಟ್ಟರೆ ತಾನೆ................

✤ ✤ ✤

ಬೆಂಗಳೂರಲ್ಲಿ ಹಲವರಾಡುವ ಭಾಷೆಯೊಂದರಲ್ಲಿ ಬೈಗಳೇ ಇಲ್ಲವಂತೆ.... ಆದರೇನು ?.... ಆ ಭಾಷೆ ಇದೆಯಲ್ಲಾ ! ಅದೇ ಸಾಕು !

✤ ✤

ಬೆಂಗಳೂರು ಹೋಟೆಲುಗಳಲ್ಲಿ ತಯಾರಾಗುತ್ತಿರುವ ಚಪಾತಿಗಳನ್ನು ನೋಡಿದಮೇಲೆ, ವಾಲ್‌ಚಂದ್ ಹೀರಾಚಂದ್‌ರವರು ಬೆಂಗಳೂರಲ್ಲೇ ಮೋಟಾರ್ ಕಂಪೆನಿಯನ್ನು ಸ್ಥಾಪಿಸಲು ಹವಣಿಸುತ್ತಿರುವರಂತೆ... ....

✤

“ ಸರ್ಕಾರದವರು ಈ ವಿಷಯದಲ್ಲಿ ಅಸಾಧ್ಯವಾದದ್ದನ್ನೆಲ್ಲ ಮಾಡಿರುವರು ....’’ (ಉತ್ತರ)... ಹಾಗಾದರೆ, ಅಸಾಧ್ಯವಾದ ಒಂದೆರಡು ಕೆಲಸಗಳಿಗೆ ಅವರು ಕೈಹಾಕುವುದು ಮೇಲೆನಿಸುತ್ತದೆ........

✤

ಇನ್ನುಮೇಲೆ ಮನೆಗಳನ್ನು ಬಾಡಿಗೆಗೆ ಕೊಡುವಾಗ ಕಿಟಕಿ, ಬಾಗಿಲು, ಕಂಭ, ತೊಲೆ ಮುಂತಾದ ಮರದ ಪದಾರ್ಥಗಳನ್ನು ಪಟ್ಟಿಮಾಡಿ ಬಾಡಿಗೆದಾರರಿಂದ ರಶೀತಿ ಪಡೆಯಬೇಕೆಂಬ ನಿಬಂಧನೆ ಜಾರಿಗೆ ಬರಬಹುದಂತೆ........ಸೌದೆಯ ಬೆಲೆ ಇಳಿದಕೂಡಲೇ ಇದನ್ನು ತೆಗೆದುಹಾಕುವರೆಂದು ನಂಬಿದೇವೆ.

✤ ✤ ✤

ಕೆನಡಾದಿಂದ ಆಮದಾಗುತ್ತಿರುವ ಗೋಧಿಯನ್ನು ಸರ್ ಶ್ರೀವಾಸ್ತವ ಅವರೂ ಸರ್ ಪುರುಷೋತ್ತಮದಾಸ ಥಾಕೂರ್‌ದಾಸ್‌ರವರೂ ತಿಂದರಂತೆ .... ತುಪ್ಪ, ಸಕ್ಕರೆ, ಇವೆರಡೂ ಇದ್ದರೆ, ಎಂಥದ್ದನ್ನಾದರೂ ತಿನ್ನಬಹುದೆಂಬುದಕ್ಕೆ ಇದೊಂದು ಉದಾಹರಣೆ.

✤ ✤ ✤

ಮೈಸೂರು ರೈಲ್ವೆಯವರು "ಪ್ರಯಾಣನಿರೋಧ ಚಳುವಳಿ"ಗಾಗಿ ಈಚೆಗೆ ಇನ್ನೊಂದು ಉಪಾಯಹೂಡಿರುವಂತಿದೆ........ ಗಾಡಿಗಳಲ್ಲಿ ಉಚಿತ ಪ್ರವಾಸ ಮಾಡುವ ತಿರುಕರು ಈಚೆಗೆ ಹಾವೆರ್ಲೀನಿಯಂಗಳನ್ನು ಹಿಡಿದು ನುಗ್ಗುತ್ತಿರುವರು.

✤ ✤ ✤

ಮಿಲಿಟರಿ ಟೀಮಿನವರನ್ನು ಅನುಕರಿಸಲು ಯತ್ನಿಸಿ, ಬರೀಕಾಲಲ್ಲಿ ಆಡುವುದನ್ನು ಬಿಟ್ಟು, ಈಚೆಗೆ ಒಂದು ಫುಟ್‌ಬಾಲ್ ಟೀಮಿನವರು ಚಪ್ಪಲಿಗಳನ್ನು ಧರಿಸಿ ಆಡಿದ್ದರಂತೆ........ಅವರು ೧೫ ಚಪ್ಪಲಿಗಳನ್ನು ಎದುರುಪಕ್ಷದ ಗೋಲೊಳಕ್ಕೆ ಒದ್ದು, ಗೆದ್ದರು.

✤ ✤ ✤

"ಲಂಚದ ವಿಷಯದಲ್ಲಿ ಆಹಾರ ಇಲಾಖೆಯವರು ಪೋಲೀಸ್ ಇಲಾಖೆಯವರನ್ನೂ ಸೋಲಿಸುತ್ತಿರುವರು" (ಕೇಂದ್ರಶಾಸನ ಸಭೆಯಲ್ಲಿ ಭಾಷಣ).... ಹೀಗೆ ಪೈಪೋಟಿ ತಂದು ಹಾಕುವುದು ಪ್ರಜಾಹಿತದೃಷ್ಟಿಯಿಂದ ಒಳ್ಳೇದಲ್ಲ.

✤ ✤ ✤

ಜಿಲ್ಲಾಧಿಕಾರಿಗಳೊಬ್ಬರು ಪ್ರೈಮರಿ ಶಾಲೆಯೊಂದನ್ನು ಸಂದರ್ಶಿಸಿದಾಗ, ಶಾಲಾಮಾಸ್ತರ ಹಗಲಿರುಳ ಶಿಕ್ಷಣದಿಂದ ತರಬೇಕಾದ ಬಾಲಕವೃಂದವು ಅವರನ್ನು ಸ್ಕೂಲು ಬಾಗಿಲಲ್ಲಿ ಸ್ವಾಗತಿಸಿ, ಅವರಿಗೆ ಹಾರ ಹಾಕಿ, ಸ್ವಾಗತ ಗೀತೆಯನ್ನು ಬಲು ಚೆನ್ನಾಗಿ ಹಾಡಿದರಂತೆ. ಆ ಸ್ವಾಗತ ಗೀತೆ ಹೀಗಿತ್ತು:

ಖಂಡವಿದೆಕೊ, ಮಾಂಸವಿದೆ, ಕೊ,
ಗುಂಡಿಗೆಯ ಬಿಸಿ ರಕ್ತವಿದೆ, ಕೊ
ಚಂಡವ್ಯಾಘ್ರನೆ ನೀನಿದೆಲ್ಲವ
ಉಂಡು ಸಂತಸದಿಂದಿರು !

✤ ✤ ✤



" ಅವರು ಯಾರು ಇಷ್ಟುಬೇಗ ಎದ್ದು ಹೋಗುವವರು ? ''

" ಅವರು ಯಾರೋ ಗೊತ್ತಿಲ್ಲ ''

ಅಂದ್ರೆ ಅವರಿಗೆ ಸಂಗೀತದಲ್ಲಿ ಬಹಳ ಅಭಿರುಚಿ ಇದೇನ್ನೋದು ಮಾತ್ರ ತಿಳಿದುಬರುತ್ತೆ.

ಕ್ಲಾರ್ಕ ಕಲ್ಲಪ್ಪನ

ಅಹಲ್ಯಾಯೋಗ

ಕಲ್ಲಪ್ಪ ಕೂತಿದ್ದನಹಲ್ಯೆಯಂತೆ, ಪಾಪ, ಜೀವವಿಮೆ
ಕಚೇರಿಯ ಬಲಗಡೆಯ ತುದಿಯೆಂಬ ಮೂಲೆಯಲಿ,
ಸತ್ತವರುಸತ್ತರೋ ! ಕೊಂದವೈದ್ಯರು ಯಾರು ?
ಕಂಡ ನಂಟರು ಯಾರು ? ವಿಧವೆಯರು ಎಷ್ಟುಜನ ?
ಕಂತುಕಂತುಗಳೆಲ್ಲ ಕಾಲ ಕಾಲಕೆ ಸರಿಗೆ
ಬಂದು ಸೇರಿತೊ ? ಎಂಬ ಅಪರ ಚರ್ಚೆಗಳಲ್ಲಿ
ನೂಕಿದ್ದ ಬಾಳ ಹುಳಿಯಲಿ ಭಾರಿ ಹೋಳನವ.

* * *

ಕೋಳಿ ಏಳುವ ಮುನ್ನ ಕಲ್ಲಪ್ಪನೇಳುವನು.
ದೇಹಸೇವೆಯಮಾಡಿ, ದೇವಪೂಜೆಯ ನೀಡಿ,
ಮೊಸರನ್ನು ಕಡೆದಿರಿಸಿ, ಹೆಣ್‌ಹುಡುಗಿ ಜಡೆಹೆಣೆದು,
ಮಕ್ಕಳಿಗೆ ಇಸ್ಕೂಲು ಲೆಕ್ಕಗಳ ಮಾಡಿಟ್ಟು
ಸೌದೆಯನು ಸೀಳಿಟ್ಟು, ನೆರೆಮನೆಯ ರಾಯರಿಗೆ
ನವನೀತವನೀಡಿ ಆ ಪೇಪರನು ತಂದೋದಿ,
ಗಡಿಬಿಡಿಯ ಗೊಂದಲದಿ ಊಟಶಾಸ್ತ್ರವ ಮುಗಿಸಿ
ಮೈಗೆ ಅಂಗಿಯತೊಡಿಸಿ, ತಲೆಗೆ ಸಿಂಬಿಯ ಸುತ್ತಿ,
ದೌಡಾಯಿಸಿದನವನು ಜೀವವಿಮೆ ಮೂಲೆಗೆ !

* * *

ಕಳೆದ ಸೆಪ್ಟೆಂಬರಲಿ ಗುರುವಾರವೊಂದರಲಿ
ಮಾಮೂಲಿನಂತೆ ಆ ಕಲ್ಲಪ್ಪ ಧಾವಿಸಿದ,
ವರ್ಕರ್ ಜೇನ್‌ನೊಣದಂತೆ—ಸದ್ದುಮಾಡದೆ ಎದ್ದು

ಬಚ್ಚಲೊಲೆಹೊತ್ತಿಸಿ ಜಡೆಹೆಣೆದು ಕಸಗುಡಿಸಿ
ಜೀನೀಸ ಬಿಗಿಬಿಗಿದು !

ಓಡೋಡಿ ಬರುವಾಗ

ಆನಂದರಾಯರಾ ಸರ್ಕಲಿನ ಬಳಿಯಲ್ಲಿ
ಬಂಗಲೆಯ ತೋಟದಲಿ ಕೆಂಗುಲಾಬಿಯ ಗಿಡವು
ಬುಡದಿಂದ ತುದಿವರೆಗು ಹೂತು ನಲಿದಾಡುತ್ತ
ಕಲ್ಲಪ್ಪನನೆ ನೋಡುತ್ತಿ !

* * *

ರಾಮಚಂದ್ರನಪಾದ ಸೋಕಿತಹಲ್ಯಾಶಿರವ !

* * *

ಕಲ್ಲಪ್ಪನೆದೆಯಲ್ಲಿ ಮನೆಗೊಂಡ ಒಳಕೊಳದಿ
ಮತ್ತೆ ನೀರುಂಬಿತು ! ರಸಮಯವಾಯಿತವನ
ಬಾಳ್ಬದುಕು ! ಹಕ್ಕಿ, ಹೂ, ಹಸುರ್ನೀಲಿ,
ಗಗನ, ನೆಲ, ನಗುವ ಮಗು, ಇಂಪುತಂಪಿನಗಾನ,
ಎಲ್ಲವೂ ಆ ಚಣವೆ ಮೂಡಿತಾ ಬರಿಬಂಜೆ
ಚಿಪ್ಪಿನಲಿ !....

ಮೆಜೆಸ್ಟಿಕ್ ಚೌಕದಲಿ, ಕಲ್ಲಪ್ಪ
ಕಂಠವನು ಕ್ಯಾಕರಿಸಿ, ತನಗೆತಾನೇ ಒಂದು
ದಾಸಪದ ಗಾನಿಸಿದ.

ಸಿನಿಮ ತಾರಾಗಣದ
ಹಲ್ಕಿರಿವ ಚಿತ್ರಗಳ ದುರುಗುಟ್ಟಿ ಬಾಯ್ಬಿಟ್ಟ !
ಗುಂಡಿಗಳ ಕಳಚುತ್ತ, ಗಾಳಿ ವೋಡಾಡಿಸಿ
ಮುಖದ ಮುಳ್ಳನು ಸವರಿ,—'ಛೆ!' ಅಂದ,
ದಿನಬಿಟ್ಟು ದಿನಸ್ನಾನ ವಪನಮಾಡಿಸಬೇಕು,
ಸಿಂಬಿಯಲಿ ನುಸುಳಿದ್ದ ಜಂಗೆರೆಯ ಹೊರತೆಗೆದು
ಮತ್ತೆ ಸುತ್ತಿದ, ಕಲ್ಲ!, ಮೋಜುಮಾಡುವನಂತೆ !

ಚಲ್‌ಚಲ್‌ರೆ ನೌಜವಾನೆಂದು ಹಾಡುತಲವನು
ಜೀವವಿಮೆ ಆಫೀಸ ಮುಂಗಡೆಯೆ ನಿಂತಿದ್ದ
ನೌಜವಾನನು ಬೆಚ್ಚಿ, ಒಳನುಗ್ಗಿ ಮೂಲಿಸಿದ.

ಹೊರಗಡೆ, ಮನೋಹರ !
ಹಸುರು ಹುಚ್ಚಾದಂತೆ, ನೀಲಿ ಐಲಾದಂತೆ,
ಬುವಿಬಾನು ಉಕ್ಕಿಬರೆ, ಕಿಚಿಪಿಚೀದನಿಗೈದು
ಕಿರಲಿದಳು ಗುಬ್ಬಚ್ಚಿ.

“ ಇಲ್ಲಮ್ಮ ! ಗುಬ್ಬಚ್ಚಿ !
ಚಾಕರಿಯಬಿಟ್ಟು ಬರೆ, ನೌಕರಿಯೆ ನಾನು ? ”
ಎಂದಂದ, ಕಲ್ಲಪ್ಪ   ಆದರೂ, ಅಂಗಳದ ಹೊಂಗೆಮರ
ಕೈಬೀಸಿ ಕರೆಯಿತು. ಬಿಳಿಯ ಮೋಡದ ಮರಿಯು
‘ ಭಂಡ ’ ಎಂದಣಕಿಸಿತು. ‘ ಜಗದಗಲ ಕಡಲಗಲ
ಬಾನಗಲ ಬೆಳೆಯೊ, ಬಾ ! ಬೋನನ್ನು ಬಿಟ್ಟುಬಾ ’,
ಎಂಬ ಕರೆ ಕೇಳಿಸಿತು.

“ ಥತ್ ” ! ಎಂದ, ಕಲ್ಲಪ್ಪ.
ಸುತ್ತಮುತ್ತವರೆಲ್ಲ, ಯಾಕ್ರಿ, ಎಂದರು, ತಡೆದು.
ಒತ್ತರಿಸಿ ಎಲ್ಲರನು, ಕಲ್ಲಪ್ಪ ಕೆಳಗಿಳಿದು
‘ ಇದು ಭಾಗ್ಯ ! ಇದು ಭಾಗ್ಯ ’ ಹಾಡುತ್ತ, ಓಡಿದನು,
ದೂರದಾ ಮರದಡಿಗೆ. ಅಲ್ಲಿ ಹುಲ್ಲಲಿ ಹೊರಳಿ
ಮೈಮೇಲೆ ಎರಡಳಿಲು ಹರಿದಾಡೆ ನಕ್ಕನು,
ಎದ್ದು ಕುಣಿಕುಣಿಯುತ್ತ ಚಿಟ್ಟೆಗಳ ಹಿಂದೋಡಿ
ಮಗುವಿನಂದದಿ ನೆಗೆದ.

ದ್ವಾರಪಾಲಕ ಚಿಕ್ಕ ಕೆಟ್ಟರಲ್ಲಾ ಎಂದು,
ಚೀರುತ್ತ ಹಾರುತ್ತ ದೊಡ್ಡಸಾಹೇಬರಿಗೆ ಸುದ್ದಿಯನು
ಮುಟ್ಟಿಸಿದ. ಅವರೆದ್ದು ಗಂಭೀರ ನಡಿಗೆಯಲಿ
ಕಿಟಕಿಯಿಂ ದಿಟ್ಟಿಯನು ಅಟ್ಟಿದರು—ಕುರಿಯ
ಮರಿಯಂದದಲಿ ಕಲ್ಲಪ್ಪ ಕುಣಿವೆಡೆಗೆ.

ಉಗುರು ಬೆಚ್ಚನೆ ಬಿಸಿಲು, ತುರುಕರುಗಳಹಿಂಡು,
ಮರದಡಿಯ ಕರಿನೆರಳು ! ಇಳೆಯ ನಂದನವನದಿ
ನಲಿನಲಿವಹಳ್ಳಿಯನು ಕಂಡರಾ ಸಾಹೇಬ.
ನೋಡನೋಡುತಲವರ ಕೆನ್ನೆಗಳು ಹೊಳಪೇರಿ,
ಕಣ್ಗೆ ಶಾಂತಿಯುಮೂಡಿ, ಹೃದಯದಲಿ
ಕವನ ದೇವತೆ ಕಟ್ಟಿದಳು ಸೊಗದ ಕಣಸ.
ಮಲ್ಲಿಗೆಯ ನರುಕಂಪು, ಸಂಜಿಗೆಯ ಸವಿತಂಪು,
ಹಕ್ಕಿಗಳ ಕೂಜನಂ ಕೋಗಿಲೆಗಳಂ ಚರಂ
ತಣ್ಣನೆಯ ತಂಪೆಲರು, ಕಲ್ಲಪ್ಪನನು ಕೂಡ
ಈ ಗೋರಿಯೊಂದೆಳೆಯಿತೆ ? ನಿಜ ನಿಜವು !
ಈಪರಿಯ ಸೌಂದರ್ಯದಾವಾಸಸ್ಥಾನದಲಿ—
ಕತ್ತೆಕಾಗದ ತುಂಬ ಕರಿಮಸಿಯಚೆಲ್ಲುತ್ತ,
ಸತ್ತವರ ಸಾಯುವರ ಕಂತುಗಳ ಕಂತೆಗಳ
ಕುಂತೋದಿ ಕುರುಡಾಗುವ ಬದಲು——

"ಲೋ !" "ಇಂದು ನಿಮಗೆಲ್ಲ ರಜ !" ಎಂದು
ಒಡನೊಗರಿ, ಪೇಟಹಾಕುತ ಬೇಗ, ಹೊರಬಿದ್ದು,
ಕಾರನೊಕ್ಕಡೆ ಕಳುಹಿ, ಮತ್ತೊಂದು ಮರದಡಿಗೆ
ನಡೆದವರು, ಶಿಲ್ಪಿಯೂದುತ ಹೂವ ಸರಕಟ್ಟಿ
ಸುತ್ತಿದರು ಬುರುಡೆ ನಡುವಣ ಜುಟ್ಟಿಗೆ !
ಆಯಿ ಬಹಾರೆಂಹು ಹಾಡಿದರು ಮನತಣಿಯೆ.

—ಪಾಠಾಳಿ.

ನಿಜವಾಗ್ಲೂ

ನಿಜವಾಗ್ಲೂ— ಮಂಗಳೂರು ‘ ಬೀಚಿ ’ನಲ್ಲಿ ಮರಳಿನಮೇಲೆ ನಿಧಾನವಾಗಿ ನಡೆದುಕೊಂಡು ಹೋಗುತ್ತಿದ್ದೆ. ಸ್ವಲ್ಪ ಕತ್ತಲಾಗಿತ್ತು. ಆಗಾಗ ತಣ್ಣಗೆ ಗಾಳಿ ಬೀಸುತ್ತಿತ್ತು. ಇದ್ದಕ್ಕಿದ್ದ ಹಾಗೆ ಹತ್ತಿರದಲ್ಲಿಯೇ ಸಮುದ್ರದ ಅಲೆಗಳಲ್ಲಿ ಸಿಕ್ಕಿ ಯಾರೋ ‘ ಹೆಲ್ಪ್, ಹೆಲ್ಪ್ ’ ಎಂದು ಗಟ್ಟಿಯಾಗಿ ಕೂಗಿಕೊಂಡ ಶಬ್ದವು ಕೇಳಿ ಬಂತು. ತಕ್ಷಣ ನಾನು ಸಮುದ್ರದಲ್ಲಿ ಧುಮುಕಿ, ಅಲೆಗಳಲ್ಲಿ ಮುಳುಗಿ, ನೀರಿನ ಮಧ್ಯದಿಂದ ಒಂದು ವ್ಯಕ್ತಿಯನ್ನು ದಡಕ್ಕೆ ಎಳೆದುಕೊಂಡು ಬಂದು ಮರಳಿನ ಮೇಲೆ ಹಾಕಿದೆ. ಅದೊಂದು ಪರಂಗಿ ಹುಡುಗಿ. ನೀರು ಕುಡಿದು ಜ್ಞಾನವಿಲ್ಲದೆ ಬಿದ್ದಿದ್ದಳು. ಪ್ರಾಣವಿದೆಯೋ ಇಲ್ಲವೋ ಎಂದು ನೋಡಲು ಅವಳ ಪಕ್ಕದಲ್ಲಿ ಕುಳಿತು ಮುಖದ ಬಳಿ ಬಗ್ಗಿನೋಡುವಷ್ಟರಲ್ಲಿ ನನ್ನ ಬೆನ್ನಿಗೆ ಯಾರೋ ಬಲವಾಗಿ ಗುದ್ದಿ, “ ನಡಿಯೋ ಬದ್ಮಾಷ್, ಸ್ಟೇಷನ್‌ಗೆ ” ಎಂದರು. ತಿರುಗಿ ನೋಡುವಲ್ಲಿ ಇಬ್ಬರು ಧಾಂಡಿಗ ಪೋಲೀಸಿನವರು. ನನಗೆ ರೇಗಿ ಹೋಯಿತು. “ ಕಷ್ಟಪಟ್ಟು ನಾನು ಇವಳನ್ನು ನೀರಿನಿಂದ ಎಳೆದು ಹಾಕಿ ಪ್ರಾಣ ಉಳಿಸಲು ಪ್ರಯತ್ನ ಪಡ್ತಾ ಇದ್ದರೆ, ನಿಮ್ಮಕೈಲಿ ಏಟುತಿಂದು ಬೈಗಳು ಕೇಳಬೇಕೋ ? ನೀವು ಬದ್ಮಾಷ್, ಬಡಾ ಬದ್ಮಾಷ್‌ಗಳು ” ಎಂದು ಕೂಗುತ್ತಾ ಅವರಿಬ್ಬರ ಕೆನ್ನೆಗೂ ರಪರಪನೆ ನಾಲ್ಕು ಬಿಗಿದು ಕೋಪದಿಂದ ಬುಸುಗುಟ್ಟುತ್ತಾ ನಿಂತೆ. ಒಂದು ಕ್ಷಣದಲ್ಲಿ ಅವರಿಬ್ಬರೂ ನನ್ನನ್ನು ಕೆಳಕ್ಕೆ ಕೆಡವಿ ಕತ್ತುಮೇಲೆ ಕೂತು ಹೊಡೆಯಲು ಪ್ರಾರಂಭಿಸಿದರು. ನಾನು ಹೇಗೋ ‘ ಪಟ್ಟು ’ ಮಾಡಿ ತಪ್ಪಿಸಿಕೊಂಡು, ಮರಳಲ್ಲಿ ಹೊರಳಿ, ಮೇಲೆದ್ದು ಅವರಿಬ್ಬರನ್ನೂ ಕೆಳಗೆ ತಳ್ಳಿ, ಮೇಲೆಕೂತು ಎರಡು ಕೈಗಳಿಂದಲೂ ಬಲವಾಗಿ ಗುದ್ದುತ್ತಾ ಇರುವುದರೊಳಗೆ - - - - - ನನ್ನ ತಲೆಗೆ ಏನೋ ತಗಲಿ ಬಹಳ ನೋವಾಯಿತು. ‘ ಅಯ್ಯಯ್ಯಪ್ಪಾ ’ ಎಂದು ತಲೆ ಸವರಿಕೊಳ್ಳುತ್ತಾ ಎದ್ದು ನೋಡುವಲ್ಲಿ ಮಂಚದಿಂದ ಕೆಳಗೆ ಬಿದ್ದಿದ್ದೆ. ರೂಮಿನಲ್ಲಿ ದೀಪಹಾಕಿ ಕನ್ನಡಿಯಲ್ಲಿ ನೋಡಿಕೊಂಡೆ. ಗಾಯದ ಗುರುತು ಕಾಣಿಸಲಿಲ್ಲ. ತಲೆಗೆ ಮೂಗು ಪೆಟ್ಟು ಬಿದ್ದಿತ್ತು. ದೀಪ ಆರಿಸಿ ಪುನಃ ಮಂಚದಮೇಲೆ ಹೋಗಿ ಮಲಗಿದೆ. ಬೇಗ ನಿದ್ದೆ ಬರಲಿಲ್ಲ. ಅತಾರಾ ಕಛೇರಿಯಲ್ಲಿ ಎರಡು ಘಂಟೆ ಹೊಡೆದ ಸದ್ದು ಕೇಳಿಸಿತು.

ಆ ದಿವಸ ರಾತ್ರಿ ‘ ಹೆಲ್ತ್ ಕಿರ್ಚ್ ’ ಹೋಟಲಲ್ಲಿ ಪಟ್ಟಾಗಿ ಈರುಳ್ಳಿ ಹುಳಿ ಹೊಡೆದಿದ್ದೆ.

ಮನೆಯಾಕೆ ಮಂಗಳೂರಿಗೆ ಹೋಗಿ ತಿಂಗಳಮೇಲಾಗಿತ್ತು.

—ಬುಳ್ಳ.

ಇಂಗ್ರೇಜಿ ಜನರ ಕೊಂಕುನುಡಿಗಳು

ತೃಣವಿಧವೆ — ಪತಿ ಪರಸ್ಥಳಹೋಗಿರುವ ಸತಿ
ಭಿತ್ತಿಪುಷ್ಪ — ಯಾರೂ ಬಯಸದ ಹೆಣ್ಣು
ಹೆಂಚುಕಳಚಿತು — ಹುಚ್ಚನಾದ
ಬಕ್ಕೆಟ್ ಒದ್ದ — ಸತ್ತ
ಆಲುಗಡ್ಡೆಬೋನು — ಬಾಯಿ
ಹಸ್ತತೈಲ — ಹಣ
ಸಿಹಿ ಹಲ್ಲು — ಮಿಠಾಯಿ ಆಸೆ
ಕಜ್ಜಿ ಕೈ — ಲಂಚದಾಸೆ
ಪಿಟೀಲು — ಕಜ್ಜಿ
ಗಂಟಿನ ಟೀ — ನೀರುನಿರಾದ ಚಹ
ಬಾಲವನ್ನು ನೀರಲ್ಲಿರಿಸಿದ — ಹಣವಂತನಾದ
ಕರಿಕುರಿ — ನಂಬಲರ್ಹರಲ್ಲದವರು
ಇಕ್ಕಟ್ಟಾದ ಮನೆ — ಸಮಾಧಿ ; ಗೋರಿ
ಅಳುಮೋರೆನಾಯಿ — ಹಾಸ್ಯಗಾರ
ಕಾಡುಕೋಳಿ — ಸಾಲ ತೀರಿಸಲಾರದವ
ಕರಡಿ ಆಡಿಸುವವ — ದೊಡ್ಡಮನುಷ್ಯರನ್ನು ಆಶ್ರಯಿಸುವವ
ನೀಲೀರಕ್ತದವ — ಶ್ರೀಮಂತ ; ಉತ್ತಮಕುಲದವ
ಕುರಿದೃಷ್ಟಿ — ಪ್ರೇಮದೃಷ್ಟಿ
ರೊಟ್ಟಿಕುಕ್ಕೆ — ಹೊಟ್ಟೆ
ಪೊರಕೆದಾಟಿದ — ಮದುವೆಮಾಡಿಕೊಂಡ
ಇಟ್ಟಿಗೆ — ಒಳ್ಳೆಯುವ
ಆನೆ ನೋಡಿದವ — ವಿಷಯ ತಿಳಿದವ
ಕರೀ ಸೋಮವಾರ — ರಜ ಮುಗಿದು ಶಾಲೆ ಬಾಗಿಲು ತೆಗೆಯುವ ದಿನ
ಉತ್ತಮಾರ್ಧ — ಸತಿ
ಅಧಮಾರ್ಧ — ಪತಿ
ಪಿರಂಗಿ — ದೊಡ್ಡಮನುಷ್ಯ
ದೇವರ ಜಮೀನು — ಸ್ಮಶಾನ

REF: ENGLISH IDIOMS (J. N. DIXON.)

ಸೂಪರ್ ಸರ್ವಜ್ಞ

ಚ ಟಾ ಕಿ ಪ ದ ಗ ಳು

೧

" ನಾನು ಹಾಡಲು ಏಕೆ ನಿಲ್ಲುವಿರಿ ಹೊಸಲಲ್ಲೆ ? "
" ಮಾನಿನಿಯ ನೀಭಂಡ — ಸುಂ ಸುಂಗೆ
ಹೊಡೆವನೆಂದಾರು ", ಸರ್ವಜ್ಞ

೨

ಅಡಿಗೆ ಮನೆಯಲ್ಲಾದ ಸದ್ದಿಗೇಸೊಸೆ ಬೆದರಿ
ಓಡಿ ಬಂದತ್ತೆಗೆ — " ನೀವಲ್ಲ !
ಪಾತ್ರೆಯೇ ಬಿತ್ತೆ ? ", ಸರ್ವಜ್ಞ

೩

" ನಾನಿನಗೆ ಅರೆ ಲಕ್ಷ ಮೋಸ ಮಾಡಿದೆನಲ್ಲೊ !
ಸಾಯುವೆನು ; ಕ್ಷಮಿಸೆ "ನಲು — ಆವನಂದ,
" ನಾನೆ ವಿಷವಿಕ್ಕಿರುವೆ ", ಸರ್ವಜ್ಞ

೪

ಸೆಕೆಂಡ್ ಕ್ಲಾಸಿಗೆ ನುಗ್ಗಿ, ಟಿಕ್ಕೀಟಕೇಳ್ದಾಗ
ಅದ ಕಳಕೊಂಡ ಬಲುಜಾಣ — ಜರ್ನಿಯಾ
ಎಂಡನೇ ಮರೆತಿದ್ದ, ಸರ್ವಜ್ಞ

೫

" ಅಮ್ಮಾವರೆನ್ನನ್ನು ಸಾಹೆಬರು ಬೈನಂತೆ
ಸುಮ್ಮನೇ ಬೈಯುವರು ; — ನಾ ಕುಕ್ಕು !
ಗಂಡನೇ ? ಇಗೊ, ಹೊರಟೆ ", ಸರ್ವಜ್ಞ

೬

" ವಾಟ್ ವಿಲ್ ಯು ಡೂ ಟು ಚದುರಿಸಲು ದೊಂಬಿಯನು ? "—
ವೈವದಲಿ ಹೀಗಂದ — ದಾಸಮಗ,
" ತಟ್ಟಿ ತೋರಿದರಾಯ್ತು ", ಸರ್ವಜ್ಞ

೭

'ಮನೆತನಕೆ' ಸಂದ ಬಿರುದಾದರೂ, ಕ್ಲಾರ್ಕುಗಳು,
'ಮನೆಯತನಕ' ಎಂದು — ತಿದ್ದುವರು,
ಕೈಯ ಬಿಸಿ ಮಾಡದಿರೆ, ಸರ್ವಜ್ಞ

೮

ಕಾಲೇಜ ಪಾಠವನು ಮುಗಿಸಿ ರೂಮಿಗೆ ಮರಳಿ
ದೈಲೊಬ್ಬ "ಮರಳಿರುವೆ—ನೇಽ" ಎಂದು
ಕನ್ನಡಿಯ ನೋಡಿದನು, ಸರ್ವಜ್ಞ

೯

"ನೀತಂದ ಕಾಫಿಯಲಿ ಹಲ್ಲಿ ಬಿದ್ದಿದೆಯಲ್ಲೊ!
ಏನರ್ಥ?" ಎಂದೆನಲು — ಮಾಣಿಗೆ,
ಜ್ಯೋತಿಷ್ಯ ತಿಳಿಯುವುದೆ?, ಸರ್ವಜ್ಞ

(ಸಶೇಷ)

—ಎಂ. ನಾಭಿರಾಜ.

ಬೆಳ್ಳಗಿರುವುದನೆಲ್ಲ ಹಾಲೆಂದು ನಂಬುತ್ತ
ಕಳ್ಳಕಾವಾಡಿಗಗೆ - ತೆತ್ತ ಹಣ
ವಾಟರ್ ಟ್ಯಾಕ್ಸೇ, ಅಕ್ಕು! ಸರ್ವಜ್ಞ

ಸಂಸಾರ ಸಾಗರದಿ ಸವಿತುಂಬಿ ನಲಿದಾಡೆ
ಒಂದ್ಸಾರಿಯೂ ಬಿಡದೆ — ಹೆಂಡತಿಯ
ಮುಖ್ಸಾರೆ ನಡೆಯುವುದು, ಸರ್ವಜ್ಞ

—ನಾ. ಕ.

ದೊಡ್ಡ ವಂಶ

ನನ್ನ ಹೆಸರು ಅರಿಕೇಸರಿ. ನಿಮಗೆ ತಿಳಿದಿರುವಹಾಗೆ, ಅದು ಅಂಥ ಸಾಮಾನ್ಯ ಹೆಸರಲ್ಲ; ದೊಡ್ಡ ಹೆಸರು. ನನ್ನ ತಾತನ ಹೆಸರೂ ಕೂಡ ಅದೇ ಆಗಿತ್ತು. ನನ್ನ ವಂಶದಲ್ಲೆಲ್ಲ ಅರಿಕೇಸರಿ, ಭುಜಕೇಸರಿ, ಇದಕೇಸರಿ, ಅದಕೇಸರಿ, ಎಂಬ ಹೆಸರುಗಳೇ ಉದ್ದಕ್ಕೂ ನಡೆದುಬರುತ್ತಿವೆ. ನನ್ನದು ದೊಡ್ಡ ಮನೆತನ. ಪಂಪಭಾರತದ ಕಾಲದಿಂದಲೂ ಇದೇ ನನ್ನ ಮನೆಯ ಮಹಾತ್ಮೆ, ಎಂದು ನೀವು ಊಹಿಸಿದರೆ ತಪ್ಪಾಗಲಾರದು.

ನಾನು ಹುಟ್ಟುತ್ತಲೇ ತಂದೆ ತಾಯಿಗಳನ್ನ ತಿಂದ ತೋಳ. ನನ್ನನ್ನ ಮೂರು ಚಿಕ್ಕಮ್ಮಂದಿರು ಸಾಕಿ ಸಲಹಿದರು. ಮೂವರೂ ವಿಧವೆಯರು; ಬಂಜೆಯರು. "ಕೂಸು, ಪಾಪ, ಕೀರ್ತಿವಂತ ಕುಲದಲ್ಲಿ ಹುಟ್ಟಿದೆ; ಇದನ್ನ ಮನೆತನದ ಮಾನಕ್ಕೆ ತಕ್ಕ ಹಾಗೆ ಬೆಳೆಸಬೇಕು", ಎಂದು ಅವರು ಹೆಣಗಾಡಿದರು. ನಾಲ್ಕಾರು ಮನೆ ತಿರುಗಿ ತಿರುಪೆ ಎತ್ತಿ ನನಗೆ ಹರಳೆಣ್ಣೆ ತಂದು, ಎರೆದು, ನನ್ನನ್ನು ಪೊರೆದರು. ಪುರೋಹಿತ ಶಿವಶಂಕರಶಾಸ್ತ್ರಿಗಳೂ ನನ್ನಪಾಲಿನ ಪರದೈವವಾದರು. "ಸಿಂಹದ ಮರಿ, ಅಮ್ಮಾ, ಉಗುರು ಬೆಳೆಯುವತನಕ ಉಳಿಸಿ!" ಎಂದು ಅವರು ದಿನವೂ ಹೇಳುವರಂತೆ.

ನನ್ನಮನೆ ದೇವರ ಕೋಣೆಯಲ್ಲಿ ಒಂದು ಪೆಠಾರಿ ಇತ್ತು. ಅದನ್ನ ನನ್ನ ಚಿಕ್ಕಮ್ಮಂದಿರು ಬಹು ಜಾಗರೂಕತೆಯಿಂದ ಕಾಪಾಡಿಕೊಂಡು ಬಂದರು. ದಿನವೂ ಅದರ ತಳವನ್ನು ಎತ್ತಿ ಗುಡಿಸಿ ಗೆದ್ದಲನ್ನು ಓಡಿಸುವರು. ಅದರ ಹತ್ತಿರವೇ ದಿನವೂ ರಾತ್ರಿ ಇಲಿ ಬೋನನ್ನು ಅಣಿಮಾಡುವರು. ಹಗಲೆಲ್ಲ ಅದರ ಮೂಲೆಯೊಂದರಲ್ಲಿ ಬೆಕ್ಕನ್ನು ಮಲಗಿಸುವರು. ಅದನ್ನು ಎಂದೂ ತೆಗಿಯುತ್ತಿರಲಿಲ್ಲ. 'ನೀನು ದೊಡ್ಡವನಾದಮೇಲೆ ತೆಗಿಯೋಣ, ಸುಮ್ಮನಿರು?'' ಎಂದು ನನಗೆ ಸಮಾಧಾನ ಹೇಳುವರು.

ನನಗೆ ಸದಾ ಕುತೂಹಲ! ಅದರೊಳಗೆ ನನ್ನ ಮನೆತನದ ಸಿರಿಯ ಕುರುಹೊಂದು ಗೊತ್ತಾದ ಮೇಲಂತೂ, ಆದಷ್ಟು ಬೇಗ ದೊಡ್ಡವನಾಗಿಬಿಡಬೇಕೆಂದು ನಾನು ಯಾವಯಾವುದೋ ಜಾಹಿರಾತುಗಳನ್ನು ಓದಿ, ಕರಿ ಕೋತಿ ಲೇಹ್ಯ, ಕರಡಿಕೊಬ್ಬು, ಆನೆ ಕಷಾಯ, ಮುಂತಾದವುಗಳನ್ನೆಲ್ಲ ಚಿಕ್ಕಮ್ಮಂದಿರಿಗೆ ಗೊತ್ತಾಗದೆ ಸೇವಿಸಿದೆ. ವ್ಯಾಯಾಮಶಾಲೆಗೆ ಸೇರಿ ಎತ್ತರ ಹೆಚ್ಚಿಸಲು ಕಾಸು ತೆತ್ತೆ.

ಪುರೋಹಿತರ ಕಾಲು ಹಿಡಿದೆ. ಚಿಕ್ಕಮ್ಮಂದಿರೆದುರು ಜೋಕ್ಕ ಮಾಡಿದೆ. ಜಾತಕ ಬದಲಾಯಿಸಿದೆ.

ನನ್ನಂಥ ಮಹಾವಂಶೀಯರು ಕೀಳು ದರ್ಜೆಯ ಶಾಲೆಗಳಿಗೆ ಹೋಗಬಾರದು ಎಂದು ಚಿಕ್ಕಮ್ಮಂದಿರು ನನ್ನನ್ನು ಓದಿಸಲೇ ಇಲ್ಲ. ಪುರೋಹಿತರೇ ನನಗೆ ಆದ್ಯಂತ ಗುರುಗಳಾದರು. ನಾನು ನನ್ನ ದೊಡ್ಡತನವನ್ನು ಪ್ರಪಂಚಕ್ಕೆ ಸಾರಿ, ಪೆಠಾರಿ ಯೊಳಗಿನ ಮರುಹನ್ನು ಹೊರತಂದು, ಸರ್ಕಾರದಿಂದ ಸಲ್ಲಬೇಕಾದ ಪೆನ್‌ಷನ್ ಅಥವಾ ಜೀವನಾಂಶ ಪಡೆಯುವ ಸುಸಂದರ್ಭವನ್ನೇ ಕಾದುಕಾದು ಚಿಕ್ಕಮ್ಮನವರು ಬೆಂಡಾದರು. ದಿನದಿನಕ್ಕೂ ಸಾಲಮಾಡುತ್ತಲೂ ಇದ್ದರು.

ನನ್ನ ಹದಿನೇಳನೆಯ ಹುಟ್ಟಿದ ಹಬ್ಬ ಕಡೆಗೂ ಬಂತು! ಆ ದಿನವೇ ಪೆಠಾರಿಯ ಕವಾಟೋತ್ಸವ! ಮನೆ ಮುಂದೆ ಮಾವಿನ ತೋರಣ; ಹಿಂದೆ, ಅಡಿಗೆಯ ಹೊಗೆ. ಮನೆಮೇಲೆ ಕಾಗೆಗಳ ತಂಡ. ಒಳಗೆ ಕಿಲಕಿಲನಗು. ಪುರೋಹಿತರ ಓಡಾಟ; ಚಿಕ್ಕಮ್ಮಂದಿರ ಚೀರಾಟ. ನಮ್ಮೂರು ಅಮಿಲ್ದಾರರು ಮುಖ್ಯ ಅತಿಥಿಗಳು....

ನಾನು ಸ್ನಾನಮುಗಿಸಿ, ದೇವರಮುಂದೆ ದಂಡಪ್ರಣಾಮಮಾಡಿದೆ. ನನ್ನನ್ನು ಪೆಠಾರಿಯ ಮುಂಭಾಗದಲ್ಲಿ ಕೂರಿಸಿದರು. ಚಿಕ್ಕಮ್ಮಂದಿರು ದೀಪದ ಹಿಂದೆ ನಿಂತಿದ್ದರು, ಪೆಠಾರಿ ಒಳಗಿನ ಕುರುಹು ಯಾವ ಪಾಳೇಗಾರರಕಾಲದ್ದು, ಅಥವಾ, ವಿಜಯನಗರದ ಅರಸರದೋ, ಅಥವಾ, ಇನ್ನೂ ಹಿಂದಣ ಚೋಳ ಚಾಲುಕ್ಯ ರಾಷ್ಟ್ರಕೂಟ, ಕದಂಬ, ಗಂಗಾದಿ ವಂಶಗಳ ಪೈಕಿ ಯಾವ ವಂಶದ್ದೋ, ಎಂದು ನಿರ್ಧರಿಸಲು ಅಮಿಲ್ದಾರ್‌ರು ಹತ್ತಿರವೇ ಹಾಜರಿದ್ದರು.

ನನ್ನ ಭಾಗ್ಯ ಸರ್ವಸ್ವವಾದ ಪೆಠಾರಿ ಬಾಯಿತೆರೆಯಿತು. ಒಳಗೆ ಒಂದು ಜರತಾರಿ ನಿಲುವಂಗಿ ಇತ್ತು. ಅದನ್ನು ಮೆಲ್ಲನೆ, ಹಸುಗೂಸನ್ನು ಎತ್ತಿ ಮಡಿಲ ಮೇಲೆ ಮಲಗಿಸಿಕೊಳ್ಳುವಂತೆ, ನನ್ನ ಚಿಕ್ಕಮ್ಮ ಅಮಿಲ್ದಾರರ ಮಡಿಲಲ್ಲಿ ಇರಿಸಿದರು.

ಅವರು ಅದನ್ನು ಭಕ್ತಿಪೂರ್ವಕ ಬಿಚ್ಚಿ, ಎದ್ದುನಿಂತು, ಕೊಡವಿದರು. ನಾವೆಲ್ಲರೂ ಅವರ ಬಾಯಿಂದ ಬರುವ ಮಾತನ್ನೇ ಎದುರುನೋಡುತ್ತ ನಿಂತೆವು.

'ಇದು ಕಮಿಷನ್‌ಕಾಲದ ದಿವಾನ್‌ಕಚೇರಿ ದಫೇದಾರನ ಉಡುಪು' ಅಂದರು, ಅವರು........

—o—

ನನ್ನ ಮನಸ್ಸಿನಲ್ಲಿ ನಾನು!



ಫೋಟೋವಿನಲ್ಲಿ ನಾನು!!



ನಾನು!!!



ಬಿಡುಗಡೆ

(ಪ್ರಗ ಕವನ)

ಜೈ! ಬಡವರ ಬಿಡುಗಡೆ
ದಡಬಡ ನಡೆಯಲಿ, ಜೈ! ಜೈ! ಜೈ!

೧

ದೀನ — ಹೀನ
ಪತಿತ — ದಲಿತ — ಜೈ! ಬಡವರ....

೨

ಸಾಲ — ಸೋಲ
ದೇವ — ದಾವ — ಜೈ! ಬಡವರ....

೩

ಮಾನ — ಮೋಷ
ಕ್ಷೀಣ — ದ್ವೇಷ — ಜೈ! ಬಡವರ....

೪

ಕರಗಿ — ಕೊರಗಿ
ಮರುಗಿ — ಸೊರಗಿ — ಜೈ! ಬಡವರ....

—o—

ಗುಪ್ತಗಣಿತ

ವಿದ್ಯಾ ಇಲಾಖೆಯ ಮುಖ್ಯಾಧಿಕಾರಿಗಳು ತಮ್ಮ ಮುಖವನ್ನು ಗಂಟುಹಾಕಿಕೊಂಡರು. ಮೊದಲೇ ಭಯಂಕರವಾಗಿದ್ದ ಅವರ ಮುಸುಡಿಗೆ ಇದರಿಂದ ಹುಳಿಯೇರಿತು. ಯಾವುದೋ ಒಂದು ಕಟ್ಟನ್ನು ತೆಗೆದು ತಮ್ಮ ಮುಂದಿರಿಸಿಕೊಂಡು, ಅವರು ಬೆಲ್ಲು ಬಾರಿಸಿದರು. ಥಂಗನೆ ಒಳಕ್ಕೆ ನೆಗೆದ ಜವಾನನ್ನುದ್ದೇಶಿಸಿ, "ಕರೆದುಕೊಂಡು ಬಾ, ಅವರನ್ನ!" ಎಂದು ಗರ್ಜಿಸಿದರು. ಜವಾನನ ಜಂಘಾಬಲ ಉಡುಗಿಹೋಯಿತು.

ಬಂದವರ ಮುಖವನ್ನು ಮುರಿದು, ಇನ್ನು ಎಂದೆಂದಿಗೂ ಅವರು ತಮ್ಮ ಆಫೀಸಿಗಾಗಲಿ, ಬಂಗಲಿಗಾಗಲಿ ಬರದೆ ಇರುವಹಾಗೆ ಅವರಿಗೆ ಮಾನಭಂಗಮಾಡಬೇಕೆಂಬುದೇ ಅಧಿಕಾರಿಗಳ ಮುಖದ ಗಂಟು.

ಶ್ರೀಮಾನ್ ಗುಪ್ತರು ಒಳಕ್ಕೆ ಬಂದರು. ಅಂಗಿ ಸರಿಪಡಿಸುತ್ತಾ ಹಲ್ಲುಕಿರಿದರು. ಕೊಡೆಯನ್ನು ಕೊಂಕುಳಿಂದ ಕೆಳಕ್ಕಿಳಿಸಿ ಎಡಗೈಗೂ ಬಲಗೈಗೂ ಓಡಾಡಿಸಿದರು. ಕಡೆಗೆ ಸೂಚಿತವಾದ ಕುರ್ಚಿಯೊಂದರಲ್ಲಿ ಕುಳಿತರು.

"ಏನು? ಗುಪ್ತರೇ! ಆ ಕೆಲಸದ ವಿಷಯತಾನೆ? ಗಣಿತಶಾಸ್ತ್ರದ್ದು! ಅದು ಸಾಧ್ಯವಿಲ್ಲ!"

"ಛೆ! ಛೆ! ತಾವು ಹೀಗೆ ಅಪ್ಪಣೆಕೊಡಿಸಿದರೆ ಹೇಗೆ? ನನ್ನ ಮಗ ಈಗ ಬೊಂಬಾಯಿ ಕಾಲೇಜಲ್ಲಿ ಅಧ್ಯಾಪಕನಾಗಿದಾನೆ.... ಒಳ್ಳೆ ಹೆಸರು ಪಡೆದಿದಾನೆ.... ಸಂಶೋಧನೆಗಳು ಹತ್ತಾರು ನಡೀಸಿದಾನೆ........"

"ಅಲ್ರಿ! ಗುಪ್ತರೇ! ಗಣಿತ ಅಂದರೆ, ಅದೇನು ನಿಮ್ಮ ವಂಶದ ಆಸ್ತಿಯೇನ್ರಿ? ಬೇರೊಬ್ಬರ ಬುರುಡೆಗೂ ಅದು ಹತ್ತುವುದೇ ಇಲ್ಲವೇನ್ರಿ?"

"ಹ....ಹ್ಹ....ಹ್ಹ....ತಾವು....ತಿಳಿದವರಾಗಿ....ಹೀಗೆ....ಹಾಸ್ಯ!...."

"ಹಾಸ್ಯವಲ್ರಿ, ಇದು! ಊರೋರೆಲ್ಲ ಅದನ್ನೇ ಕೇಳುತ್ತಿದಾರೆ, ಈಗ! ನನಗಂತೂ ಬೇಜಾರಾಗಿ ಹೋಗಿದೆ. ಬೂನಾದಲ್ಲಿ ನೀವೇ ಪಿತಾಮಹರಾಗಿ ಪ್ರತಿಷ್ಠೆಮಾಡಿಸಿಕೊಂಡು ಬಿಟ್ಟಿದ್ದೀರಿ!..........."

"ಎಷ್ಟುದಿನ ಇನ್ನೂ? ನನಗೆ ಆಗಲೇ ೫೦ ಆಗುತ್ತಾ ಬಂತು!"

"ಇನ್ನೂ ಐದು ವರ್ಷಗಳಿವೆ, ಗುಪ್ತರೇ! ಐದುವರ್ಷ! ಆಮೇಲೆ, ನಿಮ್ಮ ಮಗ ವರರಾಕಾಲೇಜಲ್ಲಿ ಗಣಿತ ಪ್ರೊಫೆಸರ್, ನಿಮ್ಮ ತಮ್ಮ ಭೋಲಾಪುರದ

ಸಯನ್ಸ್ ಕಾಲೇಜಿನಲ್ಲಿ ಗಣಿತದ ಪ್ರೊಫೆಸರ್, ನಿಮ್ಮ ಅಳಿಯ ಬೂನಾ ಇಂಜಿನಿಯರಿಂಗಲ್ಲಿ, ಇನ್ನೊಬ್ಬ ಅಳಿಯ ಬೂನಾ ಕಮರ್ಷಿಯಲ್ ಕಾಲೇಜಲ್ಲಿ........ ಏನಿದು, ಗುಪ್ತರೇ? ಗಣಿತ ಅಂದರೆ ನಿಮ್ಮಗುತ್ತಿಗೆಯೋ?"

"ನನ್ನ ಮಗನಾಗಿ ಹುಟ್ಟಿದ ತಪ್ಪಿಗೆ ಅವನು ಬೊಂಬಾಯಿ ಕಾಲೇಜಲ್ಲೇ ಕೊಳೆಯಬೇಕೆ?"

"ಇಲ್ಲ, ಇಲ್ಲ! ಈಗ ಬೂನಾ ಅಗ್ರಿಕಲ್ಚರಲ್ ಕಾಲೇಜಲ್ಲಿ ಆಗಿರುವ ವೇಕನ್ಸಿಯನ್ನ ನಾನು ಬೇರೊಬ್ಬರಿಗೆ ಆಗಲೇ ವಾಗ್ದಾನವಮಾಡಿದೇನೆ।"

"ಹಾ!"

"ಹುಂ! ಡಾ|| ನಾರಾಯಣ್‌ರವರಿಗೆ. ಮೊನ್ನೆತಾನೆ ಇಂಗ್ಲಂಡಿಂದ ಬಂದರಲ್ಲಾ, ಅವರಿಗೆ!"

"ಹಾಗಾದರೆ, ನನ್ನಮಗ?"

"ನಿಮ್ಮ ಮಗ ಬೊಂಬಾಯಿ ಕಾಲೇಜಲ್ಲೇ ಇರಲಿ. ಈ ಕೆಲಸಮಾತ್ರ ಡಾ|| ನಾರಾಯಣ್‌ರವರಿಗೆ ಅಂತ ಆಗಲೇ ತೀರ್ಮಾನವಾಗಿ ಹೋಗಿದೆ. ನಾಳೆ ಅವರು ಚಾರ್ಜು ವಹಿಸಿಕೊಳ್ಳುತ್ತಾರೆ"

"ಒಳ್ಳೆಯದು! ನಾರಾಯಣ್ ಅವರು ನನ್ನ ವಿದ್ಯಾರ್ಥಿಯಾಗಿದ್ದರು. ಪ್ರತಿಭಾವಂತ.... ಆದರೂ, ಇನ್ನೂ ಚಿಕ್ಕಪ್ರಾಯ......."

"ಹೌದು, ಚಿಕ್ಕಪ್ರಾಯ. ಪ್ರತಿಭಾವಂತ........ ಪ್ರಿನ್ಸಿಪಾಲ್, ವೈಸ್ ಚಾನ್ಸಲರ್.... ಆಗಲಿ, ಅನುಭವಿಸಲಿ, ಅದಕ್ಕೇನು?"

"ಹಾಗಾದರೆ ನನ್ನ ಮಗನ ಗತಿ? ಅವನ ಹೆಂಡತಿಗೆ ಬೇರೆ ಮೈ ಹುಷಾರಿಲ್ಲ ಟಿ. ಬಿ. ಅಂತ ಡಾಕ್ಟರುಗಳು ಹೆದರಿಸುತ್ತಿದ್ದಾರಂತೆ"

"ನಿಮ್ಮ ಮಗನನ್ನ ನಾನು ಬೂನಾಗೆ ಕರೆತರುವಹಾಗಿಲ್ಲ.... ಬರುವ ವರ್ಷ, ಅಂದರೆ, ಇನ್ನು ನಾಲ್ಕು ತಿಂಗಳಲ್ಲಿ, ಆ ಕಾಲೇಜು ಗಣಿತದ ಪ್ರೊಫೆಸರ್ ರಿಟೈರಾಗುವಾಗ, ಅವರನ್ನೆ ಪ್ರೊಫೆಸರಾಗಿ ಅಲ್ಲೇ ಖಾಯಂ ಮಾಡುತ್ತೇನೆ, ಅಷ್ಟೆ. ನಿಮ್ಮ ಇಷ್ಟ ಬಂದಂತೆ ನೀವು ಲೆಕ್ಕಾಚಾರ ಮಾಡುತ್ತಿದ್ದ ಕಾಲ ಮುಗಿಯಿತು, ಗುಪ್ತರೇ!"

"ಆಗಲಿ, ತಮ್ಮಿಷ್ಟ! ಅಷ್ಟಾದರೂ ಆರ್ಡರ್ ಮಾಡ್ತೀರಾ?"

"ಓಹೊ! ಈಗಲೇ! ಇಕೊ, ಕೊಟ್ಟೆ. ಆರ್ಡರ್ ಕಾಪಿ ಕೈಯಲ್ಲೇ ತೆಗೆದುಕೊಂಡು ಹೋಗಿ.... ಆದರೆ, ಬೂನಾದಲ್ಲಿ ನಿಮ್ಮ ಹಾವಳಿ ಕೂಡಲೇ

ನಿಲ್ಲಬೇಕು. ಯಾವ ಹೊಸ ಕಾಲೇಜಲ್ಲೂ ನಿಮ್ಮ ಸಂತತಿ ಕಾಲಿಡಕೂಡದು....
ಗೊತ್ತಾಯಿತೆ !"

ಮಗನಿಗೆ ಬೊಂಬಾಯಿ ಕಾಲೇಜಿನ ಪ್ರೊಫೆಸರ್‌ಗಿರಿ ಖಾತ್ರಿ ಆದದ್ದಕ್ಕಾಗಿ ಒಳಗೊಳಗೆ ಹಿಗ್ಗುತ್ತ, ಗುಪ್ತರು ಅಧಿಕಾರಿಗಳ ರೂಪದಿಂದ ಹೊರಬಂದರು. "ಮೂರನೆಯ ಮಗಳು, ಮಾಧವಿಯನ್ನ ಡಾ|| ನಾರಾಯಣ್‌ಗೆ ಕೊಟ್ಟು ಮದುವೆ, ಎಂಬ ಲಗ್ನಪತ್ರಿಕೆಯನ್ನ ಈ ಅಧಿಕಾರಿಗೆ ನಾಲ್ಕುದಿನ ತಡವಾಗಿ ಕಳುಹಿಸಬೇಕು ...... ಹೌದು.... ನಾಳೆ ನಾಳದ್ದು ಅದು ಅವರ ಕೈಸೇರಕೂಡದು", ಎಂದು ನಿರ್ಧರಿಸುತ್ತ, ಗುಪ್ತರು ಟಾಂಗಾದೊಳಕ್ಕೆ ಕಾಲಿಟ್ಟರು.

ಈ ಬಟ್ಟೆ, ಗಜಕ್ಕೆ ೮ ರೂಪಾಯೀ ? ಇದು ಸಿಲ್ಕೇನು ?

ಹೌದು, ತಾಯಿ

ಮತ್ತೆ, 'ಕಾಟನ್' ಅಂತ ಬರೆದಿದ್ದೀರಲ್ಲಾ ಚೀಟೀಲಿ ?

ಚೀಟೀನೇ ?........ ಚೀಟೀಲಿ ಸಿಲ್ಕ್ ಅಂತ ಬರೆದಂಟಿಸಿದರೆ, ಹುಳ ಹುಪ್ಪಟೆ ಬರುತ್ತೆ, ಅಂತ ಹಾಗೆ ಮಾಡಿದೇನೆ, ಅಷ್ಟೆ........

ಲೋ ! ಕೆಂಚ ! ನಮ್ಮ ಮನೆ ಕತ್ತೆ ನಿಮ್ಮ ಹಿತ್ತಲಿಗೆ ಬಂತೇನು ?

ಇಲ್ಲಪ್ಪ.... ನಾನು ನಿನ್ನ ಕತ್ತೇನೇ ಕಾಣೆ

ಅಗೊ ! ಅದ್ಯಾವುದು ಮತ್ತೆ ಹಿತ್ತಲಲ್ಲಿ ನಿಂತು ಕೂಗುತ್ತಿರುವುದು ?

ಏನೋ ! ನನ್ನ ಮಾತಿಗಿಂತ ನಿನಗೆ ಆ ಕತ್ತೆ ಮಾತಲ್ಲೇ ಹೆಚ್ಚು ನಂಬಿಕೆ ಬಂತೋ ?

ಅನರ್ಥ ಕೋಶ

ನಚಿಕೇತಸ್ : "ಸಾಯಿಸೊ !....ಮಗನೆ !" ಎಂದು ತಂದೆ ಬಾಯಲ್ಲಿ ಅನ್ನಿಸಿದ ಧೀರಪುತ್ರ

ನತಪೃಷ್ಠ : 'ತಬ್ಬಲಿ'ಯನ್ನು ನೋಡಿ

ನರಕ : ಇಹಲೋಕದ ಜೋಟಿಲು ; ಅದರ ಪರಲೋಕದ ಪ್ರತೀಕ

ನರಮೇಧ : ಶಾಂತಿಸ್ಥಾಪನೆಗಾಗಿ ಆಗಾಗ ನಡೆಸಬೇಕಾದ ಯಾಗ

ನರೆ : ಜೀವನದ ಹೋರಾಟದಲ್ಲಿ ಸೋತೆನೆಂದು ಸೂಚಿಸಲು ಮಾನವರು ಹಾರಿಸುವ ಬಿಳಿ ಬಾವುಟ

ನಾಕ : ನರಕದ ಮೇಲಿನ ಪೈಪೋಟಿಯಿಂದ ದೇವತೆಗಳು ಸ್ಥಾಪಿಸಿರುವ ಒಂದು ಆನಂದಭವನ

ನಾಟಕ : ಕಾಂಪ್ಲಿಮೆಂಟರಿ ಟಿಕೀಟಿನವರಿಗಾಗಿ ಕಂಪೆನಿಯವರು ಮಾಡುವ ಕುಚೇಷ್ಟೆ

ನಾನು : ಕನ್ನಡಭಾಷೆಯಲ್ಲಿನ ಅತ್ಯಾನಂದಕರವಾದ ಮಾತು

ನಾಮ : "ದೇವನೊಬ್ಬನೇ, ನಾಮ ಹಲವು" "ರಾವಣೋ ನಾಮ ರಾಕ್ಷಸಃ" ಇತ್ಯಾದಿಗಳನ್ನು ನೋಡಿ

ನಾಯಿ : ಆರೋಗ್ಯ ಇಲಾಖೆಯ ಸ್ವಯಂಸೇವಕ

ನಾಲಗೆ : ಚಾಡಿಕೋರರು ಬಾಯೊಳಗಿಟ್ಟುಕೊಂಡಿರುವ ಕೊಂಡಿ

ನಾಷ್ಟ : ಬಸ್ ಕಂಡಕ್ಟರುಗಳ ಬೆಳಗಿನ ಉಪಹಾರ

ನಾಳೆ : ನಮ್ಮ ಸ್ನೇಹಿತರು ನಮಗೆ ನೆರವಾಗುವ ಕಾಲ

ನೀರು : ಒಂದು ತರಹದ ಸ್ವದೇಶೀಪಾನೀಯ ; ಈಚೆಗೆ ಇದನ್ನು ಹಾಲೆಂದು ಕರೆಯುವ ರೂಢಿ

ನೋ ! ನೋ ! : ಇತ್ಯಮೇರಿಃ

ನಂಟ : ಪಿಡುಗು ಪಂಡಿತ

—ಬಾಶಾಂತ.

ಸೊಳ್ಳೆಪರದೆಯೊಳಗಿನ

—— o ——

ಹೆಣ್ಣು ಸೊಳ್ಳೆ ಬಂತು ಕಡಿಯಾಕs ॥ಪ॥

ಮನೆ ಅಂಗಳದಲಿ ಸಂ—

ಧಿಕಾಲದಲಿ

ರಜನಿಯಿನ್ನು ಬಾರದಾಗ

ಆ ಸೂಜಿ ನಾಳ ಮುಖ

ಪ್ಯಾರಸೈಟು ಸಖ

ಹಾಡ ಹಾಡಿದಾಗ

ಪಡುವ ಕಪ್ಪು ಈ

ನಾಡ ಮುಸುಕಿರೆ

ಕಾಡೆ ಮಲಗಿದಾಗ ॥ ೧ ॥

ಕಳೆದ ಇರುಳಿನs

ಕಡಿತ ಸುಖವನ

ನೆನೆಸಿ ಕುಗ್ಗಿದಾಗ

ಬಂಗಾರವಿಲದಕ್ಕೆ

ಸಿಂಗಾರ ಕರಿಯುನ್ನೆ

ಕಂದ ಮಲಗಿದಾಗ ॥ ೨ ॥

ಹಸುವ ಕೆಂಗ ರಾ

ಹಸಿವನೊಕೆ ವೊಲೆ

ಹಾಲ ಹೀರಿದಾಗ

ಕತ್ತಲಾಗೆ ಮನೆ

ಅಂಗಳದಲಿ ಕರಿ

ಹಣತೆ ಹಚ್ಚಿದಾಗ ॥ ೩ ॥

ಮುಸರೆ ತಿಕ್ಕುತಿರೆ
ಕಸಕ ಬಳಿಯುತಿರೆ ಕಡು
ಕಡಿಮೆ ಬಂದುದೀಗ
ಏಳು ಏಳು ಸಖಿ !
ಮಲಗಾ ಪರದೆಯೊಳು
ಎಂದೆ ನಾನು ಆಗ- ॥ ೪ ॥

ನಿನಗೋ ಛಳಿಜ್ವರ
ಮಗುವಿಗೆ ಛಳಿಜ್ವರ
ನಾಡೆ ಮಲೆರಿಯು ಈಗ
ನಾ ಮಲಗೆ ಪರದೆಯೊಳು
ನೀ ಮಲಗೆ ಪರದೆಯೊಳು
ಜನತೆಳಿದಾ ನಡೆವುದಾಗ ॥ ೫ ॥

—ಬಿ. ಸ್ವಾ.

ಡಾಕ್ಟರು : (ಲಾರಿ ಅನಾಹುತದಿಂದ ಗಾಯಗೊಂಡ ಬಡಪಾಯಿಯ ಸಂಬಂಧೀಕರನ್ನು ಸಂಬೋಧಿಸಿ) ಆತನಿಗೆ ಮೂರು ಭಾರಿಗಾಯಗಳಾಗಿವೆ. ಒಂದೇನೋ ಬಹಳ ಭಾರಿ.... ಪ್ರಾಣ ಉಳಿಯುವಹಾಗಿಲ್ಲ.... ಇನ್ನು ಎರಡು ಗಾಯಗಳಿವೆಯಲ್ಲ ಅವುಗಳನ್ನ ನಾನು ವಾಸಿಮಾಡುತ್ತೇನೆ ! ನೀವು ಭಯಪಡಬೇಡಿ.

ಭಟ್ಟಾಕಳಂಕನ ಒಳದನಿ

ರಬ ಕವಿಯು ಸಾಹಿತ್ಯಸಮ್ಮೇಳನದ ಅಧ್ಯಕ್ಷಸ್ಥಾನಕ್ಕೆ ಆರಿಸಿ ಬಂಧಿರುವ ಶ್ರೀಯುತ ಶಿ. ಶಿ. ಬಸವನಾಳ ಇವರ ಸಂಪಾದಕತ್ವದಲ್ಲಿ ಪ್ರಕಟವಾಗಿರುವ ಪ್ರಾಚೀನ ಕನ್ನಡ ಗ್ರಂಥವಾದ ಭಟ್ಟಾಕಳಂಕನ "ಶಬ್ದಾನುಶಾಸನ"ವನ್ನು ಕಳೆದ ಹುಣ್ಣಿಮೆಯ ದಿನ ನಾನು ಬೆಳದಿಂಗಳಲ್ಲೇ ಕುಳಿತು ಓದುತ್ತಿದ್ದೆ. ಮಹಾಪಂಡಿತ ನಾಗ ಭಟ್ಟಾಕಳಂಕನು ಆ ಗ್ರಂಥದಲ್ಲಿ ಕೇವಲ ವ್ಯಾಕರಣವೊಂದನ್ನೇ ಅಲ್ಲದೆ, "ಶಬ್ದ" ಅಂದರೆ, ಪಂಚಭೂತಗಳಿಂದಾಗುವ ಶಬ್ದ, ಅದರಲ್ಲೂ, ಮೊದಲನೆಯ ಭೂತವಾದ ಪೃಥಿವಿ, ಅಂದರೆ, ಮೃತ್, ಮೃದಂಗ ಶಬ್ದ: ಮೃದಂಗಶಾಸ್ತ್ರವನ್ನು ಪ್ರತಿಪಾದಿಸಿ, ಕಡುಬಿನೊಳಗಣ ಹೂರ್ಣದಂತೆ, ಟೋಪಿಯೊಳಗಣ ಬುರುಡೆಯಂತೆ, ಸೇರಿಸಿರುವದು ಎಂದು ನನಗೆ ತಿಳಿಯಿತು. ಇದುವರೆಗೂ ಈ ಗ್ರಂಥವನ್ನು 'ಶಬ್ದಾನುಶಾಸನ', 'ವ್ಯಾಕರಣಗ್ರಂಥ'. ಮಾತ್ರ ಎಂದು ನಂಬಿದ್ದ ಕನ್ನಡಿಗರಿಗೆ ಈಗ ನಾನು ಈ ಹೊಸ ಬೆಳಕನ್ನು ಹೆಮ್ಮೆಯಿಂದ ನೀಡುತ್ತಿದೇನೆ.

ಶಬ್ದಾನುಶಾಸನದ ಸೂತ್ರಗಳನ್ನು ನೋಡಿದರೆ, 'ಮೃಗಸ್ಯ' (186) ಅಂದರೆ, ಈ ಮೃದಂಗಶಾಸ್ತ್ರವನ್ನು ಆತ ಮಗನಿಗಾಗಿ ರಚಿಸಿದನೆಂದೂ, 'ನ ಗುರೋಃ' (336) ಅವನಿಗೆ ತಂದೆಯಲ್ಲದೆ ಬೇರೆ ಗುರುಗಳಿಲ್ಲವೆಂದೂ, 'ಹಗಲಿರುಳ:' (263) ಹಗಲಿರುಳೂ ಭಟ್ಟಾಕಳಂಕನು ತನ್ನ ಮಗನನ್ನು ಅಭ್ಯಾಸ ಮಾಡುವಂತೆ ಪ್ರೇರೇಪಿಸಿದನೆಂದೂ, 'ಅಗಳೀಗಳೋಃ ನಿತ್ಯಂ' (364) ಮಗ 'ಆಗ' 'ಈಗ' ಅಂತ ಸಬೂಬು ಹೇಳಿ ತಪ್ಪಿಸಿಕೊಳ್ಳಲು ಯತ್ನಿಸಿದರೂ, ನಿತ್ಯವೂ ಬಿಡದೆ ಅವನನ್ನು ಶಿಕ್ಷಿಸುತ್ತಿದ್ದನೆಂದೂ, ಗೊತ್ತಾಗುತ್ತದೆ. 'ಕೇನ ಜೀವತಿ ಗವಣಿಗೌ' (415), ಅಂದರೆ, ಮೃದಂಗ ಬಾರಿಸುವುದರಿಂದಲೇ ಗವಣಿಗರೂ ಕೂಡ ಜೀವನ ನಡೆಸುತ್ತಿರುವಾಗ, 'ನಿನಗೇನು ಬಂತೋ ಕೇಡು' ಎಂದು ಭಟ್ಟಾಕಳಂಕನು ಮಗನನ್ನು ಕೇಳಿ ಮೂದಲಿಸಿರಬೇಕು.

ಮೃದಂಗ ಬಾರಿಸುವ ಬಗೆಯನ್ನು ಭಟ್ಟಾಕಳಂಕನು, 'ಲುಪ್ಪಿಂದು ಮುಂದೋಃ' (349), 'ಒಂಬತ್ತು ಪತ್ತ್ರೋಃಸ್ತಾ ದಿವ್' (173) 'ಉಗುವುಗುಮಿ ಗೋಃ' (560) 'ಎಂಟು ನಾಲ್ಕಯೋದ್ವಂದ್ವೇ' (351) 'ದಗಿವಾದೌನಪಿ' (216) ಮುಂತಾದ ಸೂತ್ರಗಳಲ್ಲಿ ವಿವರಿಸಿದಾನೆ. ಮೊದಮೊದಲು ಅಭ್ಯಾಸಕ್ಕಾಗಿ 'ಪಾತ್ರಸ್ಯಭಾಂಡೇವಾ' (119), ಪಾತ್ರವನ್ನಾಗಲಿ ಭಾಂಡವನ್ನಾಗಲಿ ಉಪಯೋಗಿಸಬಹುದಂತೆ. 'ಕುಟ್ಟ್ಯೋರಿಗೋಲುಪ್ಪ' (548), ಅಂದರೆ, ಕುಟ್ಟ್ಯೋರಿಗೇನು ಮಹಾ, 'ಲುಪ್', 'ಲುಪ್', ಅಂತ ಪ್ರಾರಂಭಮಾಡಿದರಾಯಿತು, ಎಂಬ ಧೈರ್ಯವನ್ನೂ ಸಹ ಭಟ್ಟಾಕಳಂಕನು ಕೊಡುತ್ತಾನೆ. 'ಅಕ್!

ತುತ್ತು ಗೇತಿ ' (284) ಎಂಬುದೂ ಕೂಡ ಪ್ರಾಥಮಿಕ ಅಭ್ಯಾಸಕರಿಗೆ ಅನ್ವಯಿಸುತ್ತದೆ. ನಾಲ್ಕಾರು ತಿಂಗಳುಗಳಾದಮೇಲೆ, ' ತುದಿ ಮೊದಲಃ ಪೂರ್ವಸ್ಮಾದಿ ಸ್ವರಾತ್ ತ್ರಶ್ಚ ' (389) ಪುನಃ ಮೊದಲಿನಿಂದಲೂ ತಬಲದಮೇಲೆ ನುಡಿಸುತ್ತಾ ಬರುವುದು. ' ತರ್ಬಿರಃ ಕುಕ್ಷ ' (527) ತಬಲವನ್ನು ಕುಕ್ಕುವುದು—ಇದೇ ಶಾಸ್ತ್ರೀಯಪದ್ಧತಿ.

ಮೃದಂಗ ಮುಂತಾದ ಸಂಗೀತಸಾಧನಗಳನ್ನು ಅರ್ಧ ಕಲಿತು ಬಿಡಬಾರದು, ಪೂರ್ತ ಪ್ರವೀಣನಾಗುವವರೆಗೂ ಅಭ್ಯಾಸ ಮಾಡಲೇಬೇಕೆಂಬುದೇ ಭಟ್ಟಾಕಳಂಕನ ಮತ. ಅವನು ' ಎವರಮೆವರೆಗಂ ಕಾಲಸ್ಯನಷ್ಟ ', ಯಾವವರೆಗೆ ಪೂರ್ಣ ನಿಪುಣತೆ ಸಿದ್ಧಿಸಿಲ್ಲವೋ, ಅದುವರೆಗೆ ' ಕಾಲಸ್ಯ ನಷ್ಟ ', ಅಂದರೆ, ಕಾಲ ಕಳೆಯಿತಲ್ಲಾ, ಎಂಬ ಚಿಂತೆಯನ್ನು ಬಿಡಬೇಕು, ಎಂದು ಹೇಳುತ್ತಾನೆ. ಹಾಗೆ ನಿಪುಣನಾದರೆ, ಮೃದಂಗ ಹಿಡಿದು ಸಭಾಮಧ್ಯದಲ್ಲಿ ಕೂತರೆ, ಸರಿ, 212 ನೆಯ ಸೂತ್ರದಲ್ಲಿ ಭಟ್ಟಾಕಳಂಕ ಹೇಳಿರುವ ಹಾಗೆ, ' ಒಡನೆ ನ !! ', ಸಭೆಯಲ್ಲಿ ಸಂಕೇತಿಗಳು ಬಹಳ ಜನ ಇದ್ದರೆ, ' 140 ನೆಯ ಸೂತ್ರದಂತೆ, ' ಡೋ, ಬಹುಲಂ ' !

ಇದಕ್ಕಿಂತ ಹೆಚ್ಚಿನ ಪ್ರತಿಫಲವನ್ನು ಯಾವ ಮೃದಂಗ ಚತುರ ತಾನೆ ಬಯಸಿಯಾನು ?

ಅಂತು, ಅನೇಕ ಶಾಸ್ತ್ರಗಳನ್ನು ಒಂದೇ ಗ್ರಂಥದಲ್ಲಿ, ಬಹ್ವರ್ಥ ಸೂಚಕ ಸೂತ್ರಗಳಿಂದ ಪ್ರತಿಪಾದಿಸಬಲ್ಲ ಪ್ರಭಾಶಕ್ತಿ ಭಟ್ಟಾಕಳಂಕನಿಗಿದ್ದದ್ದು ಆಶ್ಚರ್ಯಕರ. ತೀಕ್ಷ್ಣಬುದ್ಧಿಗಳಾದ ವಾಚಕರು ಅವನ ಶಬ್ದಾನುಶಾಸನವನ್ನು ಓದಿದರೆ, ಇತರ ನಾಲ್ಕು ಭೂತಗಳ ' ಶಬ್ದ ' ಅಂದರೆ, ಜಲತರಂಗ, ಟಾಕಿ, ಕೊಳಲು, ರೇಡಿಯೋ ಮುಂತಾದವುಗಳಿಗೆ ಸಂಬಂಧಿಸಿದ ಶಾಸ್ತ್ರಗಳೂ ಈ ಸೂತ್ರಗಳಲ್ಲಿವೆಯೋ, ಏನೋ?

' ಶಬ್ದಾನುಶಾಸನ 'ದ ಸಂಪಾದಕರು ಇತ್ತ ಕಡೆ ಗಮನ ಕೊಡುವರೆ ?

—ಎಸ್. ಪಿ. ರೇವಣ್ಣ.

---o---

ಕೆಂಚಿ ! ನೀನು ತಕೊ, ಅಮ್ಮ, ಈ ಸೀರೇನ ! ನಾನು ಇದನ್ನ ಉಟ್ಟು ಕೊಂಡರೆ, ಸಾಹೇಬರು ಬೈತಾರೆ ; ಚೆನ್ನಾಗಿ ಕಾಣಿಸುವುದಿಲ್ಲ, ಅಂತಾರೆ....ಕೊ !

ನನಗೆ ಬೇಡಿ, ತಾಯಿ ! ನಾನುಟ್ಟುಕೊಂಡರೂ ಸಾಹೇಬರು ಚೆನ್ನಿಲ್ಲ, ಅಂತಾರೆ, ನನಗೆ ಗೊತ್ತು.

ಡೊಂಕುಬಾಲ—ವಿಮರ್ಶೆ

ಡೊಂಕು ಬಾಲ: ವಿಡಂಬನ ಲೇಖನಗಳ ಸಂಗ್ರಹ ;

ಲೇಖಕರು: ಶ್ರೀ. ನಾ. ಕಸ್ತೂರಿ ;

ಪ್ರಕಾಶಕರು: ಲಲಿತ ಸಾಹಿತ್ಯಮಾಲೆ, ಧಾರವಾಡ ;

೧೧೦ ಪುಟಗಳು, ಬೆಲೆ ರೂ. ೧-೮-೦.

ಶ್ರೀ. ಕಸ್ತೂರಿಗಳ "ಯದ್ವಾತದ್ವಾ" ಹರಟೆಗಳ ಸಂಗ್ರಹವಾದಮೇಲೆ, "ಡೊಂಕುಬಾಲ" ವೇ, ಅವರ ವಿಡಂಬನ ಲೇಖನಗಳ ಎರಡನೆಯ ಸಂಗ್ರಹ. ಕತೆಗಾರ, ಪ್ರಜಾಮತ, ವಾಣಿ, ಕೊರವಂಜಿ, ಮುಂತಾದ ಪತ್ರಿಕೆಗಳಲ್ಲಿ ಆಗಾಗ ಪ್ರಕಟವಾದ ಹರಟೆಗಳ ಜೊತೆಗೆ, ಇನ್ನೂ ಕೆಲವು ಹೊಸ ಹರಟೆಗಳನ್ನು ಸೇರಿಸಿ, ಡೊಂಕುಬಾಲದಲ್ಲಿ ಪೋಣಿಸಿ, ಕನ್ನಡ ಲಲಿತಸಾಹಿತ್ಯಕ್ಕೆ, ಮಾಲೆ ಹಾಕಿದ್ದಾರೆ, ಕಸ್ತೂರಿಗಳು ; ಹಾಗೂ ಪ್ರಕಾಶಕರು.

ನಮ್ಮ ಡೊಂಕುಗಳಲ್ಲಿ, ಕಸ್ತೂರಿಗಳ ಕೈಗೆ ಸಿಕ್ಕಿಬಿದ್ದಿರುವುದು—ಈ ಪುಸ್ತಕದಲ್ಲಿ ಇಪ್ಪತ್ತೆಂಟು. ಈ ಡೊಂಕಿನ ವೈವಿಧ್ಯ, ನಮ್ಮ ಆಕಾರ, ಮಾತು, ಮನಸ್ಸು, ಮಕ್ಕಳು, ಕರುಳು, ಇವುಗಳನ್ನೆಲ್ಲ ಬಳಸಿವೆ ಮುಖ್ಯ ವ್ಯಕ್ತಿಗಳಾದ, ಅಳಿಯ, ನೆರೆಮನೆಯಾತ, ಅತ್ತೆಗಾರ ಮುಂತಾದ ಮಹಾನುಭಾವರ, ಡೊಂಕಿನ ಬಣ್ಣನೆಯಿದೆ. ಸಮಾಜದ ಡೊಂಕುದಾರಿಗಳ ಬಗ್ಗೆ ವಿಡಂಬನವಿದೆ. "ಚಕ್ರದೃಷ್ಟಿ"ಯಲ್ಲಿ ಹನ್ನೊಂದು ವ್ಯಕ್ತಿಗಳೆಲ್ಲರ ಒಟ್ಟು ದೃಷ್ಟಿ ಬೀರಿದಾಗ ಕಾಣುವ, ಗುಂಡಪ್ಪನ ಚಿತ್ರದಂತೆ, ಡೊಂಕುಬಾಲದ ಇಪ್ಪತ್ತೆಂಟು, ಡೊಂಕುಗಳನ್ನು ಒಟ್ಟಾಗಿ ನೋಡಿದರೆ, ಅವುಗಳ ನಾಯಕರಾದ ನಮ್ಮ ಚಿತ್ರ ಮೂಡಿ ಕಾಣುತ್ತದೆ. ಲೇಖನಗಳಲ್ಲಿ, ಬರವಣಿಗೆಯ ಶೈಲಿಯಲ್ಲಿ, ವೈವಿಧ್ಯವಿದೆ; ಇದು, ಸಂಗ್ರಹಕ್ಕೆ ಕಳೆ ಕೊಡುತ್ತದೆ.

ತೀರ ಸಂಚಿತವಾದ ಮಾತುಗಳನ್ನು ಬದಲಾಯಿಸಿ, ಹೊಸ ಮಾತುಗಳನ್ನು ನಿರೂಪಿಸಿ, ಆ ಮಾತುಗಳಿಗೆ, ಹೊಸದೊಂದು ಮೆರುಗುಕೊಟ್ಟು, ವ್ಯಕ್ತಿತ್ವವನ್ನೇ ಕೊಡುವುದು, ಕಸ್ತೂರಿಯವರ ಹಾಸ್ಯದಲ್ಲಿ ಒಂದು ಚಮತ್ಕಾರ. 'ಹಾಲೋಗರ'ವನ್ನ, 'ಸಾಲೋಗರ', ಅದರ ಚಿರಪರಿಚಿತರಾದ ನಮಗೆ, ಅರ್ಥಗರ್ಭಿತವಾಗಿದೆ. "ವದನಾರವಿಂದ"ಗಳೆಷ್ಟೋ ನಿಜವಾಗಿಯೂ, "ವೇದನಾರವಿಂದ"


ಗಳೇ. ಪ್ರಾಚೀನಾರೀತಿ, ಗುಳ್ಳಕಂಠಸ್ನ, ಕನ್ಯಾಕುಬ್ಜ, ಕೀರ್ಥಾನಿ, ಮುಂತಾದ ಹೊಸಮಾತುಗಳನ್ನು ಚೆನ್ನಾಗಿ ಸವಿಯಬೇಕೆಂದರೆ, ಹರಟೆಗಳನ್ನೇ ಓದಬೇಕು.

ಅವರ ಪುಸ್ತಕಕ್ಕೆ ಮುನ್ನುಡಿ ನಿಜವಾಗಿಯೂ, ಮೂರನೆಯ ಪುಟದ ಕಡೆಯಲ್ಲಿದೆ; "ಅಂದಚೆಂದಕ್ಕೆ ಡೊಂಕು, ಅಲಂಕಾರಕ್ಕೆ ಡೊಂಕು; ಹೊರತು ಅಂತರಂಗದಲ್ಲಿ ಗುಡಿಕಟ್ಟಿ, ಡೊಂಕನ್ನೇ ಆಲ್ಲರಿಸಿ, ಪೂಜೆಮಾಡಿದರೆ ವ್ಯಕ್ತಿಗೂ ಹಾನಿ; ಸಮಾಜಕ್ಕೂ ಹಾನಿ. ಬಾಲಕ್ಕೆ ಡೊಂಕಿರಬಹುದು; ವಿಧವಿಧವಾದ ಡೊಂಕಿರಬಹುದು. ಆದರೆ ಬೆನ್ನೆಲುಬು ಡೊಂಕಾಗಬಾರದು! ಮೆದುಳೊಳಗೆ ಡೊಂಕು ಮನೆಮಾಡಬಾರದು. ಇಂತಹ ಡೊಂಕನ್ನು ಕಂಡು ನಗುವ ಕಣ್ಣಿರುವವರೆಲ್ಲರೂ, ಪರಸ್ಪರ ಬೆನ್ನು, ತಲೆ ತಿದ್ದಿಕೊಂಡು ಮುಂದೆ ಸಾಗಬೇಕಾದ ಕಾಲ ಇದು". ಅದೇ ಕಸ್ತೂರಿಯವರ—ಏಕೆ ಎಲ್ಲ ತಿಳಿಹಾಸ್ಯದ ಹಿನ್ನೆಲೆ; ಗುರಿ. "ನನ್ನ ಬರವಣಿಗೆಗಳನ್ನೆಲ್ಲಾ ನಾನು ಓದಿದ ಗ್ರಂಥಗಳಿಂದಲೂ, ನಾನು ಕಂಡ ಜನಜೀವನದಿಂದಲೂ ಅಳವಡಿಸಿಕೊಂಡಿದ್ದೇನೆ" ಎಂದು ಗ್ರಂಥಕರ್ತರು ಉವಾಚಿಸಿರುವುದು; "ಈ ಬರವಣಿಗೆಗಳಲ್ಲಿ ಕಾಣಬರುವ ವ್ಯಕ್ತಿಗಳೂ, ಸನ್ನಿವೇಶಗಳೂ ಯಾರನ್ನೂ ಉದ್ದೇಶಿಸಿ ಬರೆದುವಲ್ಲ" ಎಂಬ ಸುಳ್ಳನ್ನೇ ಓದಿರುವ ನಮ್ಮ ಕಣ್ಣುಗಳಿಗೆ ಹೊಸದಾಗಿದೆ. ಎಲ್ಲೂ ಕಾಣದ, ನಡೆಯದ ಸನ್ನಿವೇಶಗಳು, ವ್ಯಕ್ತಿಗಳು ಲೇಖಕರ ಮನಸ್ಸಿನಲ್ಲಿ, ಅದರಲ್ಲೂ ಹಾಸ್ಯ ಲೇಖಕರಲ್ಲಿ ಮೂಡುವುದು ಅಸಹಜ. ನಾಲ್ಕಾರು ವ್ಯಕ್ತಿಗಳು ಕೂಡಿ, ಹೊಸಮನುಷ್ಯನ ಸೃಷ್ಟಿಯಾಗಬಹುದು; ಸನ್ನಿವೇಶಗಳು ಒಂದುಗೂಡಿ, ಮಾರ್ಪಟ್ಟು, ಹೊಸದಾಗಬಹುದು. ಆದರೂ ಇವೆಲ್ಲಕ್ಕೂ ಹಿನ್ನೆಲೆ, ನಮ್ಮ ಜೀವನ; ಜನಜೀವನ.

ಈ ಯುದ್ಧಕಾಲದಲ್ಲೂ ನಮ್ಮ ಡೊಂಕುಗಳನ್ನು ಎತ್ತಿ ತೋರಿಸಿ, ತಿದ್ದುವ ಸಾಹಸಮಾಡಿರುವ ಲಲಿತಸಾಹಿತ್ಯಮಾಲೆಯವರನ್ನು ನಾವು ಅಭಿನಂದಿಸಲೇಬೇಕು.

—ಕನ್ನಡಂ.

ಅರ್ಜಿ ಎಂಬುದೇ ಬೇರು; ಅಲೆದಾಡುವುದೇ ಮರ; ಫಲವೆಂಬುದೇ ಆರ್ಡರ್; ಪಕ್ವಕ್ಕೆ ಬಂತೆಂಬುದೇ ಸಂಬಳ; ತೊಟ್ಟುಬಿದ್ದಲ್ಲಿ ಸಾರಿಗೆ; ಸವಿದಲ್ಲಿ ಭಡ್ತಿ; ಸುಖತನ್ಮಯವಾದಲ್ಲಿ ಗ್ರೇಡು; ದೊಡ್ಡವರ ದೃಷ್ಟಿ ಹಿಂಗಿದಲ್ಲಿ ವರ್ಗ; ಕರ್ಮವತೀದು ತೀರಿಸಿದೊಡೆ ಪಿನ್ಷನ್; ಧರ್ಮದಲಿ ನಡೆದೆವಾದೊಡೆ ಆಗ ಬೀಳ್ಕೊಡುವ ಸಮಾರಂಭ; ಇಲ್ಲದೊಡೆ, ಸಾಹೇಬರ, ಕ್ಯಾಷಿಯರ, ಜೊತೆಯ ಗುಮಾಸ್ತರ, ಜವಾನರ, ಊರಮಹನೀಯರ ಶಾಪವೇ ಗಳಿಕೆ, ಹೇಳಿಗಳು ನಮ್ಮ ಕೊರವಂಜಿಯ ಕಾಯುವಪರಂಜಿ ದೇವ.



ರೋಗಿ (ರೇಗಿ): ಆ ಶೀಶೆಗಳಲ್ಲಿ ಯಾವುದಾದೊಂದ್ರಲ್ಲಿ ಕೊಟ್ಬಿಡಿ ಡಾಕ್ಟರ್ರೆ. ಈ ವರ್ಷಕ್ಕೆಲ್ಲಾ ಆಗುತ್ತೆ ಔಷ್ಧಿ. ಆಮೇಲೆ ಅದನ್ನೇ ತರ್ತಿನಿ ತಿರ್ಗ.

ಬ್ರಹ್ಮಗ್ರಂಥಿ ಬಲಂ.......ಬಲಂ!

"ಒಳ್ಳೇ ಕೊಬ್ಬಿದ ಆನೆ, ನೋಡು. ಮೈಯಲ್ಲೆಲ್ಲಾ ಪಟ್ಟೆಪಟ್ಟೆ ಬಣ್ಣಗಳು. ಜರತಾರಿ, ಬನಾತು, ಕಿಂಕಾಪಿನ ಹೊದ್ದಿಕೆಗಳು. ಮೇಲೆ, ಥಳಥಳಿಸುತ್ತಿರುವ ಬೆಳ್ಳಿಯ ಅಂಬಾರಿ. ತಲೆಯಮೇಲೆ, ಚಿನ್ನದ ಅಂಕುಶವನ್ನು ಹಿಡಿದ ಮಾವಟಿಗ–ವಜ್ರ ವೈಢೂರ್ಯಾದಿಗಳಿಂದಲಂಕೃತನಾಗಿ ಕಾಳಸರ್ಪದ ಶಿರದಲ್ಲಿ ಪ್ರಕಾಶಿಸುವ ಮಣಿಯಂತೆ ಹೊಳೆಯುತ್ತಿದ್ದಾನೆ! ಆನೆಯ ಸೊಂಡಿಲಿನಲ್ಲಿ ಒಂದು ಹಾರ; ಬಾಯಲ್ಲಿ ಉದ್ದವಾದ ಒಂದು ಬೆಳ್ಳಿ ಕಟ್ಟಿಗೆ!

ಆನೆಯು ನನ್ನನ್ನೇ ಹಿಂಬಾಲಿಸಿ ಬರುತ್ತಿದೆ. ನಾನು ಎಲ್ಲಿ ತಿರುಗಿದರಲ್ಲಿ ತಿರುಗುತ್ತೆ. ನಾನಾದರೋ ಭಯದಿಂದ ಮುಂದೆ ಮುಂದೆ ಓಡುತ್ತೇನೆ. ಅದು ಹಿಂದೆ ಹಿಂದೆ ಓಡಿ ಬರುತ್ತಿದೆ. ಆನೆಯು ಅಟ್ಟಿಸಿಕೊಂಡು ಬಂದಾಗ ನೆಟ್ಟಗೆ ಓಡಿದರೆ ಫಲವಿಲ್ಲವೆಂದು ಸೊಟ್ಟಸೊಟ್ಟಾಗಿ ಓಡುತ್ತೇನೆ—ಅದು ತನ್ನ ಸ್ಥೂಲವಾದ ದೇಹವನ್ನು ಅಲುಗಾಡಿಸಿಕೊಂಡು ಸುತ್ತಿ ಸುತ್ತಿ ಬರುತ್ತಿದೆ. ಯಾರಾದರೂ ಸಹಾಯಕ್ಕೆ ಬನ್ನಿ ಎಂದು ಕೂಗಿಕೊಳ್ಳುತ್ತೇನೆ. ಯಾರೂ ಕೇಳುವವರೇ ಇಲ್ಲ! ನೋಡಿದ ಕೆಲವರೆಲ್ಲಾ 'ಹೀಗೇಕೆ ಓಡುತ್ತೀಯೆ? ಆನೆಯು ಹತ್ತಿರಕ್ಕೆ ಬರಲಿ, ಬಿಡು, ಏನುಮಾಡುತ್ತೋ ನೋಡೋಣ' ಎನ್ನುವರು.

ನಾನು 'ಅಯ್ಯೋ, ಎಲ್ಲಿಯಾದರೂ ಉಂಟೆ? ಅದರ ಸೊಂಡಿಲಲ್ಲಿರುವ ಹಾರ ನೋಡಿ, ಬಾಯಿಯಲ್ಲಿ ಕಚ್ಚಿಕೊಂಡಿರುವ ಬೆಳ್ಳಿ ಕಟ್ಟಿಗೆ ನೋಡಿ—ಆ ಖಾಲಿ ಅಂಬಾರಿ ನೋಡಿ. ಹಾರವನ್ನು ನನ್ನ ಕುತ್ತಿಗೆಗೆ ಹಾಕಿ, ನನ್ನನ್ನು ಎತ್ತಿ ಅಂಬಾರಿಯಲ್ಲಿ ಕುಳ್ಳಿರಿಸಿಕೊಂಡು, ಆ ಬೆಳ್ಳಿ ಕಟ್ಟಿಗೆಯನ್ನು ಸೊಂಡಿಲಲ್ಲಿ ಎತ್ತಿ ನನ್ನ ಮುಂದೆ ಹಿಡಿದು, ನನ್ನನ್ನು ಮೆರವಣಿಗೆಯಲ್ಲಿ ಕರೆದುಕೊಂಡು ಹೋಗಿಬಿಟ್ಟರೆ! ....ಬೇಡಪ್ಪಾ, ಬೇಡ!'

'ಹಾಗೆ ಮಾಡಿದರೆ ನಿನಗಾದ ತೊಂದರೆಯೇನು? ಒಳ್ಳೆ ಪದವಿ ಸಿಕ್ಕುತ್ತೆ, ಅಷ್ಟೇತಾನೆ? ಅದನ್ನು ತಪ್ಪಿಸಿಕೊಂಡು ಹೀಗೆ ಓಡುವರೆ? ಏನು ನಾಚಿಕೆಗೇಡು!'

'ನನಗೆ ಆ ಪದವಿಯೂ ಬೇಡ, ಆ ಬೆಳ್ಳಿಕಟ್ಟಿಗೆಯ ಮೆರವಣಿಗೆಯೂ ಬೇಡ ....ಅಣ್ಣಾ, ಆ ಮಾವಟಿಗನನ್ನು ನೋಡಿದರೇ ಸಾಕು, ಅಂಕುಶವನ್ನು ಆನೆಗೇ ಉಪಯೋಗಿಸುತ್ತಾನೋ, ಹಿಂತಿರುಗಿ ನನ್ನನ್ನೇ ಇರಿಯುತ್ತಾನೋ! ಯೋಚಿಸಿಕೊಂಡರೇ ದಿಗಿಲಾಗುತ್ತೆ. ಅಲ್ಲದೆ, ಒಂದು ಸಲ ಆ ಅಂಬಾರಿಯನ್ನೇರಿಬಿಟ್ಟರೆ, ಕೆಳಗಿಳಿಯುವುದು ಹೇಗೆ? ಅಷ್ಟು ಎತ್ತರದಿಂದ ದುಮುಕುವುದಕ್ಕಾದೀತೆ? ಆನೆಯೇ ಇಳಿಸಬೇಕಷ್ಟೆ? ಆ ಮದಿಸಿರುವ ಆನೆ ನನ್ನನ್ನು ಮೆಲ್ಲಗೆ ಇಳಿಸಿದರೂ ಆಯಿತು, ಕೆಳಕ್ಕೆ ಎತ್ತಿ ಅಪ್ಪಳಿಸಿಬಿಟ್ಟರೂ ಆಯಿತು, ಕಂಡವರು ಯಾರು!....

ಬೇಡಪ್ಪಾ, ಬೇಡ... ಅಯ್ಯೋ, ಹತ್ತಿರ ಬಂದೇಬಿಟ್ಟಿತಲ್ಲಾ ' ಎಂದು ಕಿರಿಚುತ್ತಾ ಮತ್ತೆ ಓಡುತ್ತೇನೆ.

ಕೆಟ್ಟ ಕಣ್ಣುಗಳಿಂದ ಆನೆಯು ನನ್ನನ್ನೇ ದೃಷ್ಟಿಸಿ ನೋಡುತ್ತಾ ಹಿಂಬಾಲಿಸುತ್ತದೆ. ನಾನು ವೇಗಮಾಡಿದಷ್ಟೂ ಅದು ವೇಗವಾಗಿ ಓಡುತ್ತೆ. ಎಲ್ಲರೂ 'ಅಯ್ಯೋ ಹುಚ್ಚಾ! ಹೀಗೇಕೆ ಮಾಡುತ್ತಾನೆ! ಆನೆಯನ್ನು ತಪ್ಪಿಸಿಕೊಳ್ಳಲು ಸಾಧ್ಯವೆ? ಅದಕ್ಕೆ ಗೊತ್ತಿಲ್ಲವೆ, ಈ ಪದವಿ, ಈ ಸನ್ಮಾನ ಇವುಗಳಿಗೆ ಯಾರು ಅರ್ಹರು ಎಂದು? ಎಷ್ಟು ಓಡಿದರೂ ಕಡೆಗೆ ಸಿಕ್ಕಿಯೇ ಸಿಕ್ಕಿಹಾಕಿಕೊಳ್ಳುತ್ತಾನೆ ....ನಾವೂ ತಮಾಷೆ ನೋಡೋಣ' ಎಂದು ಗುಂಪುಗುಂಪಾಗಿ ಸೇರಿ ನೋಡುತ್ತಾರೆ. 'ಭಲೆ, ಭೇಷ್, ಆನೆ!—ಹಿಡಿ ಅವನನ್ನ' ಎಂದು ಹುರಿದುಂಬಿಸುತ್ತಾರೆ. ನಾನೋ ಇನ್ನೂ ವೇಗವಾಗಿ ಪಲಾಯನ ಮಾಡುತ್ತೇನೆ. ಊರಿನ ಬೀದಿಗಳನ್ನೆಲ್ಲಾ ಸುತ್ತುತ್ತೇನೆ. ಎಲ್ಲಿಯಾದರೂ ಅವಿತುಕೊಳ್ಳೋಣವೆನ್ನುವಷ್ಟರಲ್ಲಿ ಆನೆಯು ಹಿಂದೆ ಕಾಣಿಸಿಕೊಳ್ಳುವುದು. 'ನನ್ನನ್ನು ತಪ್ಪಿಸಿಕೊಂಡು ಎಲ್ಲಿ ಹೋಗುತ್ತಿ?' ಎನ್ನುತ್ತದೆ ಅದರ ಕಣ್ಣುಗಳು!

ಕಡೆಗೆ ಊರಿನ ಹೆಬ್ಬಾಗಿಲನ್ನೇ ದಾಟಿ ಓಡುತ್ತೇನೆ. ಊರು ಬಿಟ್ಟೋಡಿದರೆ ಬೇರೆ ಯಾರಕಡೆಗಾದರೂ ಅದು ತಿರುಗಬಹುದೆಂಬ ಆಶೆ. ಆದರೆ, ಅದು ಬಿಟ್ಟೀತೆ? ಒಂದು ನಿಮಿಷ ಕಣ್ಮರೆಯಾದರೆ, ಮಾರನೆಯ ನಿಮಿಷ ಯಥಾಪ್ರಕಾರ ಹಿಂದೆಯೇ ಸಿದ್ಧ! ಹಳ್ಳ, ಕೊಳ್ಳ, ಕಲ್ಲು, ಮಣ್ಣು, ಗಿಡ, ಮುಳ್ಳು ಯಾವುದನ್ನೂ ಲೆಕ್ಕಿಸದೆ ಓಡಿ ಓಡಿ ಕಡೆಗೆ ಒಂದು ಹೊಲದ ಬಳಿ ಬರುತ್ತೇನೆ. ಅಲ್ಲಿ ಒಂದು ನೇಗಿಲು, ಅದರ ಬಳಿ ಒಬ್ಬ ಮನುಷ್ಯ. ನಾನು ಸುಸ್ತಾಗಿ ಮುಂದೆ ಹೆಜ್ಜೆ ಇಡುವುದಕ್ಕಾಗದೆ ಮುಗ್ಗರಿಸಿ ಅವನ ಕಾಲಬಳಿ ಬೀಳುತ್ತೇನೆ. 'ಅಯ್ಯೋ ಅನ ....ನನ್ನನ್ನು ಕಾಪಾಡು....' ಎಂದು ಬೇಡುತ್ತೇನೆ. ಅವನಾದರೋ ಬೇರೆ ಊರಿನವ—ನನ್ನ ಭಾಷೆಯೇ ಅರ್ಥವಾಗುವುದಿಲ್ಲ!—ನನ್ನ ಆತುರದಲ್ಲಿ ಅಷ್ಟುದೂರ ಬಂದುಬಿಟ್ಟಿದ್ದೇನೆ. ಅವನಿಗೆ ಸಂಜ್ಞೆಗಳಿಂದ ತಿಳಿಸಲು ಯತ್ನಿಸುವವೇಳೆಗೆ ಆನೆಯೂ ಕಾಣಿಸಿಕೊಳ್ಳುವುದು. ಅವನು ನನ್ನನ್ನೂ ನೋಡುತ್ತಾನೆ. ಮುಖದಲ್ಲಿ ಕನಿಕರದೃಷ್ಟಿಯುಂಟಾಗುತ್ತೆ, ಅದೇ ನೇಗಿಲನ್ನು ನನ್ನಕೈಗೆ ಕೊಡುತ್ತಾನೆ. ನಿನ್ನ ಬಟ್ಟೆಗಳನ್ನು ನನ್ನಕೈಗೆ ಕೊಡು ಎಂದು ಸಂಜ್ಞೆಮಾಡುತ್ತಾನೆ. ನಾನು ಇದರರ್ಥವನ್ನು ಒಡನೆಯೇ ಗ್ರಹಿಸಿ 'ಭೇಷ್, ಒಳ್ಳೆಯ ಉಪಾಯ ನಿನ್ನದು' ಎಂದು ಹೇಳಿ ನನ್ನ ಅಂಗಿ ಮುಂತಾದುವನ್ನು ತೆಗೆದು ಅವನಿಗೆ ಕೊಡುವಷ್ಟರಲ್ಲಿ ಆನೆಯು ಹತ್ತಿರ ಬಂದೇಬಿಡುತ್ತೆ! ನನ್ನ ಎದುರಿಗೇ ನಿಂತುಕೊಳ್ಳುತ್ತೆ. ನನ್ನನ್ನು ದೃಷ್ಟಿಸಿ ನೋಡುತ್ತೆ.

'ದಮ್ಮಯ್ಯಾ, ಬೇಡ, ಖಂಡಿತವಾಗಿಯೂ ಬೇಡ' ಎಂದು ಅಂಗಲಾಚುತ್ತೇನೆ. ಆನೆಯು ಅವಾಕ್, ಅಳ್ಳಾಡದೇ ನಿಲ್ಲುತ್ತೆ. ದೃಷ್ಟಿಮಾತ್ರ ಕದಲಿಸು

ವುದಿಲ್ಲ ಏನು ಮಾಡುವುದು ? ಏನೇನೋ ಉಪಾಯಗಳನ್ನು ಯೋಚಿಸುತ್ತೇನೆ ಪ್ರಯೋಜನವಿಲ್ಲ. ಓದಿದ್ದನ್ನೆಲ್ಲಾ ಜ್ಞಾಪಿಸಿಕೊಳ್ಳುತ್ತೇನೆ. ಕಡೆಗೆ ಥಟ್ಟನೆ ಹೊಳೆಯುತ್ತೆ—ವಿಶ್ವಾಮಿತ್ರನ ಸೇನೆ ವಸಿಷ್ಠನನ್ನು ಮುತ್ತಿದಾಗ ವಸಿಷ್ಠನಾಡಿದ್ದು ....ತನ್ನ ಬ್ರಹ್ಮದಂಡವನ್ನು ತೆಗೆದು ಮುಂದೆ ಇಟ್ಟುಬಿಟ್ಟ ! ಒಂದು ಹುಳುವಾದರೂ ಅದನ್ನು ದಾಟಿ ಬರುವುದಕ್ಕಾಗಲಿಲ್ಲ ! ಆದರೆ ನನ್ನಲ್ಲಿ ಅಂಥಾ ಬಹ್ಮದಂಡವೆಲ್ಲಿದೆ ? ಅದಿಲ್ಲದಿದ್ದರೆ ನನ್ನಲ್ಲಿರುವುದೇನು ? ಯಜ್ಞೋಪವೀತ ! ಸರಿ, ಒಡನೆ ಅದನ್ನು ಹೊರಕ್ಕೆಳೆದೆ ಅದರ ಬ್ರಹ್ಮಗಂಟನ್ನು ಮುಂದಕ್ಕೆ ಹಿಡಿದೆ. 'ಬಾ, ಈಗ !' ಎಂದೆ ಆನೆಯನ್ನು !........

ಆನೆಯು ಸ್ವಲ್ಪಕಾಲ ಹಾಗೆಯೇ ದೃಷ್ಟಿಸಿ ನೋಡಿತು. ಒಂದು ವಿಧವಾಗಿ ನಕ್ಕಿತು. ತಿರಸ್ಕಾರಪೂರಿತವಾದ ನಗು.... ಅಣಕಿಸುವಂತಿತ್ತು. ಅದರ ಕಣ್ಣು ಗಳು 'ಅಯ್ಯೋ ಮೂರ್ಖ ! ಹೀಗೇಕಾಡುವೆ ? ಇಷ್ಟುದೂರ ಬಂದದ್ದು ಏತಕ್ಕಾಗಿ ನಿನಗೆ ಗೊತ್ತೆ ? ನೀನು ಶುದ್ಧಮುಟ್ಠಾಳ ! ಎನ್ನುವಂತಿದ್ದುವು', ಆನೆಯು ಒಂದು ಹೆಜ್ಜೆ ಮುಂದಕ್ಕಿಟ್ಟಿತು....ಸೊಂಡಿಲಿನಲ್ಲಿ ಹಾರವನ್ನು ಮೇಲಕ್ಕೆತ್ತಿತು.... ಇನ್ನು ನನ್ನ ಆಟ ಮುಗಿಯಿತು ಎಂದು ನಾನು ಭಯದಿಂದ ಕಣ್ಣುಮುಚ್ಚಿದೆ. ಆದದ್ದಾಗಲಿ ಎಂದು ಧೈರ್ಯಮಾಡಿಕೊಂಡೆ. ಒಂದು ನಿಮಿಷದಮೇಲೆ ಕಣ್ಣು ತೆರೆದೆ—ಆನೆಯು ನೇಗಿಲನ್ನು ಉತ್ತಿದ್ದ ಮನುಷ್ಯನ ಕೊರಳಿಗೆ ಹಾರಹಾಕಿ, ಅವನ ನ್ನೆತ್ತಿ ಅಂಬಾರಿಯಲ್ಲಿ ಕುಳ್ಳಿರಿಸಿಕೊಂಡು, ಅವನಮುಂದೆ ಬೆಳ್ಳಿ ಕಟ್ಟಿಗೆಯನ್ನು ಸೊಂಡಿಲಿನಲ್ಲಿ ಎತ್ತಿಹಿಡಿದು.ನಾಗಾಲೋಟದಿಂದ ಊರಿನಕಡೆಗೆ ಓಡುತ್ತಿತ್ತು !.... ಯಾರೋ ಗಟ್ಟಿಯಾಗಿ ಅಣಕಿಸಿಕೊಂಡು ನಗುವಶಬ್ದ ಮಾತ್ರ ಕೇಳಿಸುತ್ತಿತ್ತು....

ಅಂತು ನೋಡು ಹೀಗಾಯಿತು. ಆ ನಗುವಿನ ಶಬ್ದ ದಿಕ್ಕೆಲ್ಲಾ ಹರಡಿದಂ ತಾಗಿರುವಲ್ಲಿಯೇ ನನಗೂ ಎಚ್ಚರವಾಗಿ ಹೋಯಿತು........

ಹೀಗೆಂದು ನಮ್ಮ ಸೋಮಣ್ಣನು ಅವನಿಗೆ ಹಿಂದಿನ ರಾತ್ರಿ ಆದ ಸ್ವಪ್ನವನ್ನು ವಿವರಿಸಿದ.

"ಅದೇಕೆ, ಸೋಮಣ್ಣ, ಬರುವ ಚುನಾವಣೆಗಳಿಗಾಗಿ ಇಷ್ಟು ಆತುರದಿಂದ ಕಾದಿರುವ ನೀನು ಸ್ವಪ್ನದಲ್ಲಿ ಮಾತ್ರ ಹಾಗೆ ಓಡಿಹೋದೆ ?" ಎಂದೆ,

"ನೋಡು, ಬೀರಣ್ಣ, ಇದರ ಮರ್ಮ ನನಗೇ ಅರ್ಥವಾಗುವುದಿಲ್ಲ. ಸ್ವಪ್ನ ದಲ್ಲಿ ಎಲ್ಲವೂ ನಮ್ಮ ಆಶೆಗಳಿಗೆ ವ್ಯತಿರಿಕ್ತವಾಗಿಯೇ, ಇಲ್ಲಿ ನಮ್ಮ ದಿಗಿಲುಗಳಿಗನು ಸಾರವಾಗಿಯೇ ಆಗುವುದು ಎಂದು ಕೇಳಿದ್ದೇನೆ. ಆದರೂ ನಾನೇಕೆ ಹಾಗೆ ಮಾಡಿದೆ ಎಂಬುದು ಅರ್ಥವಾಗುವುದೇ ಇಲ್ಲ" ಎಂದ.

ನಾನು "ಅದು ಹೋಗಲಿ, ಅಲ್ಲ, ನಿನಗೆ ಯಜ್ಞೋಪವೀತವೆಲ್ಲಿಬಂತು, ಬ್ರಹ್ಮಗಂಟನ್ನು ಮುಂದಿಡುವುದಕ್ಕೆ ?" ಎಂದೆ.

"ಏನೋಪ್ಪ, ಆ ಹಾಳು ಜನಿವಾರ ವಾಸ್ತವ್ಯದಲ್ಲಿಲ್ಲದಿದ್ದುದು ಸ್ವಪ್ನದಲ್ಲಿ ಬಂದುಬಿಟ್ಟಿದ್ದಿತಲ್ಲಾ! ಅದು ಇಲ್ಲದೇ ಇದ್ದಿದ್ದರೆ ಆನೆಯು ನನ್ನ ಕೊರಳಿಗೇ ಹಾರ ಹಾಕಿಬಿಡುತ್ತಿತ್ತೋ ಏನೋ! ಮುಂದೆ ನಡೆಯುವುದು ಹೇಗಾದರೂ ಆಗಲಿ, ಸ್ವಪ್ನದಲ್ಲಿಯಾದರೂ ಬೆಳ್ಳಿಕಟ್ಟಿಗೆ ಮೆರವಣಿಗೆ ಮಾಡಿಸಿಕೊಂಡೇ ಬಿಡಬಹುದಾಗಿತ್ತು''....

ಎಲ್ಲವನ್ನೂ ಕೇಳುತ್ತಿದ್ದ ಸಪ್ಪು ಶಿವಯ್ಯನು ಮೇಲಕ್ಕೇಳುತ್ತಾ "ಧಿಕ್ ಬಲಂ ಇತರ ಬಲಂ ಬ್ರಹ್ಮಗ್ರಂಥಿ ಬಲಂ ಬಲಂ!" ಎಂದನು,

—ಬೀರಣ್ಣ.



" ಈತ ನನ್ನ ಬಾಲ್ಯದ ಸ್ನೇಹಿತ, ಈರ ನನ್ನ ನೊಟ್ಕೊಂಡು ಹೋಗೋಣಾಂತ ಬಂದನಂತೆ "




Toilet Soap

ನಿಮ್ಮನ್ನು ಆಶ್ಚರ್ಯಗೊಳಿಸುವ ಮಹತ್ತರ

ದೃಶ್ಯ ಪ್ರದರ್ಶನ

ಸಾರಥಿಯವರ ದೃಶ್ಯವೆಂದರೆ

ಉತ್ತಮ ದರ್ಜೆಯ ದೃಶ್ಯವೆಂದೆ

"ಮಾಯಾ ಲೋಕಂ"

ಭೂಮಿಕೆ

ಆಂಧ್ರದೇಶದ ಸುಪ್ರಸಿದ್ಧ ನಟೀನಟರ ಸಮೂಹ

ಕನ್ನಾಂಬ, ಸಿ. ಎಸ್. ಆರ್. ಆಂಜನೇಯಲು

ಕಮಲಾ ಕೋಟ್ನಿಸ್, ಜಿ. ವಿ. ಸುಬ್ಬರಾವ್,

ಬೆಜವಾಡ ರಾಜರತ್ನಂ, ಲಂಕಾ ಸತ್ಯಂ,

ಸುಪ್ರಸಿದ್ಧ ಕನ್ನಡ ತಾರೆ ಎಂ. ವಿ. ರಾಜಮ್ಮ

ಇವರೇ ಮೊದಲಾದವರು ನಟಿಸಿರುವರು

—o—

ಪ್ರೊಡ್ಯೂಸರ್ ಮತ್ತು ಚಿತ್ರ ನಿರ್ದೇಶಕರು :

ಜಿ. ರಾಮಬ್ರಹ್ಮಂ

FOR MYSORE STATE, SOUTH CANARA & COORG :

Vijayalakshmi & Co.

BOOKING THROUGH :

A. V. RAMANAMURTY

247, Gandhi Nagar **Bangalore City**

Printed by B. S. Iyengar, Bangalore City.
Publisher—B. N. Gupta, Editor—M. Shivaram.